Ph: 0824-2430881
Fax : 0824-2430882
design for what is next...
GROUP4
Complete Sanitary and Tiles
Cauvery Building, Near Unity Hospital Falnir Road, Mangalore-1.
Email : group4mangalore@gmail.com
www.group4tiles.com
Hindware NITCO Jaquar GROHE

ಅರಿವಿನ ಅಕ್ಷರ ಕ್ರಾಂತಿ

# ಅಲ್ ಅನ್ಸಾರ್

ವಾರ ಪತ್ರಿಕೆ

AL-ANSAR KANNADA WEEKLY

Hameed Kayyar
Proprietor
+91 9916943379
+91 824 2433979
9886796379
SUNHEART SOMANY Hindware CENgres HILTI Kisan
KAYYAR
TILES & SANITARY WARE
Stockists and Dealers in
SANITARYWARES, TILES & ALL KINDS OF BUILDING MATERIALS
Vishwas View, Appartment,
Near Karnataka Bank, N.H.17,
PUMPWELL, MANGALORE.2.

ಸಂಪುಟ:20 ಸಂಚಿಕೆ:41 RNI No:KARKAN/2009/28984 Regd No.:KA/SK/MNG/982/2009-11 ಆಗಸ್ಟ್ 22-28, 2011 ರಮಳಾನ್ 22-28,1432 ರೂ: 6.00

## ದೇವನ ಸಂತೃಪ್ತಿಗೆ ದಾಸನ ಸಂತೋಷ

# ಈದುಲ್ ಫಿತ್ವ್‌ರ್

ಈದ್ ವ್ರತಧಾರಿಗಳಿಗೆ ಅಲ್ಲಾಹನ ಸತ್ಕಾರ. ಅಲ್ಲಾಹನ ಸತ್ಕಾರ ವನ್ನು ಬಹಿಷ್ಕರಿಸುವುದೆಂದರೆ ಅಲ್ಲಾಹನಿಗೆ ತೋರುವ ಧಿಕ್ಕಾರ. ಈದ್‌ನಂದು ಸಂತೋಷಪಡಬೇಕು. ಹಾಗೆಂದು ಅಲ್ಲಾಹನನ್ನೇ ಮರೆತು ಬಿಡುವ ಅತಿರೇಕದ ಸಂತೋಷಕ್ಕೆ ಅವಕಾಶವಿಲ್ಲ. "ಅಲ್ಲಾಹನೇ ದೊಡ್ಡವನು" ಎಂಬುದನ್ನು ಘೋಷಿಸಿಕೊಂಡೇ ಹಬ್ಬಾಚರಣೆ ಆರಂಭಿಸುವ ವ್ಯಕ್ತಿಗೆ, ಅಂತಹ ಅಲ್ಲಾ ಹನನ್ನು ಹಬ್ಬದ ನೆಪದಲ್ಲಿ ಮೀರಿ ಹೋಗಲು ಹೇಗೆ ಸಾಧ್ಯ?

**ಪಿ.ಎಂ.ಇಬ್‌ರಾಹೀಂ ಮುಸ್ಲಿಯಾರ್, ಬೇಕಲ್**

ಪವಿತ್ರ ರಮಳಾನ್ ತಿಂಗಳಲ್ಲಿ ತನ್ನ ತೃಪ್ತಿಗಾಗಿ ಕಷ್ಟಪಟ್ಟ ದಾಸರನ್ನು ಅಲ್ಲಾಹನು ತೃಪ್ತಿ ಮತ್ತು ಶಾಂತಿಯಿಂದ ಎದುರುಗೊಳ್ಳುವ ದಿನವೇ ಈದುಲ್ ಫಿತ್ವ್‌ರ್. ಈದ್ ಎಂದರೆ ಪ್ರೀತಿ ಪಾತ್ರರನ್ನು ಸಂತೋಷದಿಂದ ಎದುರುಗೊಳ್ಳುವ ದಿನ. "ನನಗೆ ಎಲ್ಲ ದಿನವೂ ಈದ್. ಪ್ರತಿ ದಿನವೂ ನಾನು ಅವನ ಮುಖದ ಸೌಂದರ್ಯವನ್ನು ನೋಡುತ್ತಿರುತ್ತೇನೆ" ಎಂಬ ಪ್ರೇಮ ಕಾವ್ಯದ ತುಣುಕೊಂದನ್ನು ಸೂಫೀ ವಿದ್ವಾಂಸ ಅಮ್ರ್ ಬಿನ್ ಫಾರಿಳ್ (ರ) ಅಲ್ಲಾಹನಿಗೆ ಅನ್ವಯಗೊಳಿಸಿ, ಅಲ್ಲಾಹನ ಸೌಂದರ್ಯವನ್ನು ದಿನವೂ ಆಸ್ವಾದಿಸುವ ನನಗೆ ಪ್ರತಿದಿನವೂ ಈದ್ ಎಂದು ಹೇಳಿದ್ದರು. ಈದ್‌ನ ಸಂತೋಷವು ಅಲ್ಲಾಹನ ಸಂತೃಪ್ತಿಗೆ ಸಂಬಂಧಪಟ್ಟ ಸಂಗತಿಯಾಗಿರುವುದರಿಂದ ರಮಳಾನನ್ನು ಧಿಕ್ಕರಿಸಿ ಉಪವಾಸ ವ್ರತಗಳನ್ನು ಕೈ ಬಿಟ್ಟವರಿಗೆ ಈದ್ ಇಲ್ಲ.

ಈದ್‌ನಂದು ಸಂತೋಷಪಡಬೇಕು. ತಿನ್ನುವುದು, ಕುಡಿಯುವುದು, ಸುಖಿಸುವುದು ಅಂದು ಸತ್ಕರ್ಮ. ಇವನ್ನೆಲ್ಲ ಬಿಟ್ಟು ಉಪವಾಸವಿರುವುದು ಅಂದು ನಿಷಿದ್ಧ. ಈದ್ ವ್ರತಧಾರಿಗಳಿಗೆ ಅಲ್ಲಾಹನ ಸತ್ಕಾರ. ಅಲ್ಲಾಹನ ಸತ್ಕಾರವನ್ನು ಬಹಿಷ್ಕರಿಸುವುದೆಂದರೆ ಅಲ್ಲಾಹನಿಗೆ ತೋರುವ ಧಿಕ್ಕಾರ. ಅವನ ಕ್ರೋಧಕ್ಕೆ ತುತ್ತಾಗುವ ಕೆಲಸ. ತಾವು ಸಂತೋಷಪಡುತ್ತಾ ಇತರರಿಗೂ ಸಂತೋಷ ಹಂಚುತ್ತಾ ಹಬ್ಬವನ್ನಾಚರಿಸಬೇಕೆಂಬುದು ಇಸ್ಲಾಮಿನ ಅಧ್ಯಾಪನೆ. ಕುಟುಂಬ ಮತ್ತು ನೆರೆಹೊರೆಗಳನ್ನು ಸಂದರ್ಶಿಸುವುದು, ಬಂಧು ಮಿತ್ರಾದಿಗಳಿಗೆ ಫೋನ್, ಮೆಸೇಜ್, ಗ್ರೀಟಿಂಗ್ ಕಾರ್ಡ್ ಇತ್ಯಾದಿಗಳ ಮೂಲಕ ಶುಭಾಶಯ ಕೋರುವುದು ಇತ್ಯಾದಿಗಳೆಲ್ಲ ಪ್ರೋತ್ಸಾಹನೀಯ.

ಹಬ್ಬ ಸಂತೋಷಾಚರಣೆಗೆ ತಾನೇ? ಹಾಗೆಂದು ಅಲ್ಲಾಹನನ್ನೇ ಮರೆತು ಬಿಡುವ ಅತಿರೇಕದ ಸಂತೋಷಕ್ಕೆ ಅವಕಾಶವಿಲ್ಲ. ಹಬ್ಬದ ಸಂಭ್ರಮದಲ್ಲಿ ಅಲ್ಲಾಹನನ್ನು ಮರೆತುಬಿಡಬಾರದೆಂದು ಈದ್‌ನ ಆರಂಭದಲ್ಲೇ ತಕ್ಬೀರ್ ಮೊಳಗಿಸಲಾಗುತ್ತದೆ. ಚಂದ್ರದರ್ಶನದೊಂದಿಗೆ ತಕ್ಬೀರ್ ಆರಂಭಗೊಳ್ಳುತ್ತದೆ. "ಅಲ್ಲಾಹನೇ ದೊಡ್ಡವನು" ಎಂಬುದನ್ನು ಘೋಷಿಸಿಕೊಂಡೇ ಹಬ್ಬಾಚರಣೆ ಆರಂಭಿಸುವ ವ್ಯಕ್ತಿಗೆ, ಅಂತಹ ಅಲ್ಲಾಹನನ್ನು ಹಬ್ಬದ ನೆಪದಲ್ಲಿ ಮೀರಿ ಹೋಗಲು ಹೇಗೆ ಸಾಧ್ಯ?

ಸಂತೋಷವೋ, ಸಂತಾಪವೋ, ಮುಸ್ಲಿಮನ ಪ್ರತಿಯೊಂದು ಸಂಗತಿಯೂ ಅಲ್ಲಾಹನ ಆದೇಶ-ವಿರೋಧಗಳಿಗೆ ಬದ್ಧವಾಗಿರಬೇಕು. ಅಲ್ಲಾಹು ನಿಶ್ಚಯಿಸಿದ ಮೇರೆಗಳಿಗೆ ವಿರುದ್ಧವಾದುದು ಯಾವತ್ತೂ ನಿಷಿದ್ಧವೆ. ಈದ್‌ನ ನೆಪದಲ್ಲಿ ಅಲ್ಲಾಹನನ್ನು ಮರೆತ ಸಂತೋಷ ಹಲವೆಡೆ ಕಂಡುಬರುತ್ತದೆ. ಮದ್ಯಪಾನ, ಸ್ತ್ರೀಪುರುಷ ಮಿಲನ ಇತ್ಯಾದಿಗಳು ಯಾವತ್ತೂ ನಿಷಿದ್ಧವೆ. ಆದರೆ ಈದ್‌ನಂದು ಇವು ಎಂದಿಗಿಂತ ಹೆಚ್ಚು ಪಾಪಕರ. ಏಕೆಂದರೆ ಈದ್ ಅಲ್ಲಾಹು ಗೌರವಿಸಿದ ದಿನ. ಅಲ್ಲಾಹು ಗೌರವಿಸಿದ್ದನ್ನು ಅವಗಣಿಸುವುದು ಅವನ ಕ್ರೋಧಕ್ಕೆ ತುತ್ತಾಗುವ ಕೆಲಸ. ಒಳ್ಳೆಯ ದಿನಗಳ ಗೌರವವನ್ನು ಅವಗಣಿಸಿದ್ದಕ್ಕಾಗಿ ದಾವೂದ್ ನಬಿ (ಅ)ರವರ ಜನತೆಯನ್ನು ಅಲ್ಲಾಹು ಮಂಗಗಳನ್ನಾಗಿ ರೂಪಾಂತರ ಗೊಳಿಸಿದ್ದನೆಂಬುದು ಗಮನಾರ್ಹ. ಈ ಉಮ್ಮತ್‌ನಲ್ಲೂ ಲೋಕಾಂತ್ಯದ ಸನಿಹದಲ್ಲಿ ಜನರನ್ನು ರೂಪಾಂತರಗೊಳಿಸುವ ಶಿಕ್ಷೆ ಉಂಟಾದೀತೆಂಬ ಎಚ್ಚರಿಕೆ ಹದೀಸ್‌ನಲ್ಲಿದೆ.

ಈದ್ ಸಂತೋಷಕ್ಕಷ್ಟೇ ಅಲ್ಲ, ಸತ್ಕರ್ಮಗಳಿಗೂ ಸುಸಂದರ್ಭ. ಈದ್‌ನ ಹಗಲು ರಾತ್ರಿಗಳಿಗೆ ಬಹಳ ಪುಣ್ಯವಿರುವುದರಿಂದ, ಆ ಸಮಯಗಳನ್ನು ಹೆಚ್ಚು ಆರಾಧನೆಗಳಲ್ಲಿ ವ್ಯಯಿಸುವುದಕ್ಕೆ ವಿಶೇಷ ಪುಣ್ಯವಿದೆ.

ಈದ್‌ನ ರಾತ್ರಿಯಲ್ಲಿ ಹೆಚ್ಚು ಆರಾಧನಾಮಗ್ನರಾಗುವುದಕ್ಕೆ ವಿಶೇಷ ಮಹತ್ವವಿದೆ. ಅಬೂಉಮಾಮ (ರ) ವರದಿ ಮಾಡಿದ ಹದೀಸ್ ಹೀಗಿದೆ. ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳುತ್ತಾರೆ; ಎರಡು ಈದ್‌ಗಳ ರಾತ್ರಿಗಳನ್ನು ಯಾರಾದರೂ ಪುಣ್ಯ ಬಯಸಿ ನಮಾಝ್‌ನಂತಹವುಗಳ ಮೂಲಕ ಜೀವಂತಗೊಳಿಸಿದರೆ ಮನಸ್ಸುಗಳು ಮರಣಹೊಂದುವ ದಿನ ಅವನ ಮನಸ್ಸು ಮರಣ ಹೊಂದದು. (ಇಬ್ನು ಮಾಜ) ಅಂದರೆ, ಈದ್‌ನ ರಾತ್ರಿ ಸತ್ಕರ್ಮಗಳಲ್ಲಿ ತೊಡಗಿದ ವ್ಯಕ್ತಿ ಪರಲೋಕದ ಭಯಾನಕ ಸನ್ನಿವೇಶದಲ್ಲೂ ನಿರ್ಭೀತನಾಗಿರುವನು.

ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಂ ಹೇಳಿದ್ದಾಗಿ ಮುಆದ್ಸ್ ಬಿನ್ ಜಬಲ್ (ರ) ವರದಿ ಮಾಡಿದ ಹದೀಸ್ ಹೀಗಿದೆ; ಐದು ರಾತ್ರಿಗಳನ್ನು ಯಾರಾದರೂ ಸತ್ಕಾರ್ಮಗಳಿಂದ ಸಜೀವಗೊಳಿಸಿದರೆ ಅವನಿಗೆ ಸ್ವರ್ಗ ಖಚಿತ. ದ್ಸುಲ್ ಹಿಜ್ಜ 8ನೇ ರಾತ್ರಿ, ಅರಫಾದ ರಾತ್ರಿ (ದ್ಸುಲ್ ಹಿಜ್ಜ 9ನೇ ರಾತ್ರಿ), ಈದುಲ್ ಫಿತ್ವ್‌ರ್‌ನ ರಾತ್ರಿ, ಬಕ್ರೀದ್‌ನ ರಾತ್ರಿ, ಶಅ್‌ಬಾನ್ 15 ರಾತ್ರಿ (ಇಸ್ಫಹಾನಿ)

ಈದ್‌ನ ರಾತ್ರಿ, ಹಗಲುಗಳಲ್ಲಿ ಪ್ರತ್ಯೇಕ ನಿರ್ವಹಿಸಬೇಕಾದ ಆರಾಧನೆ, ಆಚರಣೆಗಳೆಂದರೆ; ಫಿತ್ವ್‌ರ್ ಝಕಾತ್, ತಕ್‌ಬೀರ್, ಸ್ನಾನ, ನಮಾಝ್, ಖುತ್ಬಾ.

➔11ನೇ ಪುಟಕ್ಕೆ


We Craft as per your Choice...
Cell : 94815 14543
94815 14541
Rifa
Burkha House
Shop No. 220,
Kunil Complex,
KANKANADY,
MANGALORE.
Ph.: 0824-2434543
Burkha, Hijab, Shawls, Scarf, Irani Shawls & Stiching


ಮದುವೆ ಖರೀದಿ ಮೇಲೆ ವಿಶೇಷ ರಿಯಾಯಿತಿ
916 gold
Gold I Silver I Birth Stone
ಅಭಿಮಾನ್ ಗೋಲ್ಡ್
ಸದಾ ಬಾಳುವ ಪರಿಶುದ್ಧತೆ
ಸೌಂದರ್ಯದ ವರ್ಣನೆಗೆಂದೇ...
ಆಕರ್ಷಕ ಅದೃಷ್ಟ ಬಹುಮಾನ ಯೋಜನೆಯ ಗೋಲ್ಡ್ ಸ್ಕೀಮ್ ನಮ್ಮಲ್ಲಿ ಲಭ್ಯ.
0820 - 4295313, (S) 2593313, Mob: 9964428159, 9880898343
ನಮ್ಮ ಮಳಿಗೆ ಭಾನುವಾರವೂ ತೆರೆದಿರುತ್ತದೆ.
ಅಂಜುಮಾನ್ ರೋಡ್, ಸಿಟಿ ಬಸ್ ಸ್ಟ್ಯಾಂಡ್, ಉಡುಪಿ.
● ಅತ್ಯಂತ ಕಡಿಮೆ ಬೆಲೆಯಲ್ಲಿ ನಿಮ್ಮ ಆಯ್ಕೆಯ ಪರಿಶುದ್ಧ ಚಿನ್ನಾಭರಣ. ಚಿನ್ನಾಭರಣಗಳ ವಿಸ್ತೃತ ಸಂಗ್ರಹ.
● ಆಭರಣಕ್ಕಾಗಿ 100% ಬೈಬ್ಯಾಕ್ ಖಾತರಿ. ಜೀವನ ಪರ್ಯಂತ ಉಚಿತ ನಿರ್ವಹಣೆ. ● ಚಿನ್ನದ ಪರಿಶುದ್ಧತೆಯನ್ನು ಪರೀಕ್ಷಿಸಲು ಗೋಲ್ಡ್ ಚೆಕ್ ಕ್ಯಾರೆಟ್ ಅನಲೈಸರ್ ವ್ಯವಸ್ಥೆ. ● ನಿಮ್ಮ ಹಳೆ ಚಿನ್ನಾಭರಣವನ್ನು ಹೊಸ ಚಿನ್ನಾಭರಣದ ಜೊತೆಗೆ ವಿನಿಮಯ ಮಾಡುವಾಗ ನಿಮ್ಮ ಹಳೆ ಚಿನ್ನಾಭರಣಕ್ಕೆ ಪೂರ್ತಿ ಮೌಲ್ಯ ಪಡೆಯಿರಿ.

## ಸಂಪಾದಕೀಯ

# ಈದ್ ಯಾವುದರ ಸಮಾಪ್ತಿ?

ಒಂದು ತಿಂಗಳ ಅಧ್ಯಾತ್ಮಯೋಗಕ್ಕೆ ವಿದಾಯ ಹೇಳುತ್ತಾ ಪವಿತ್ರ ರಮಳಾನ್ ಮೆಟ್ಟಿಲಿಳಿಯುತ್ತಿದೆ. ಇನ್ನು ಹೆಚ್ಚೆಂದರೆ ಐದಾರು ದಿನಗಳಷ್ಟೇ ಉಳಿದಿವೆ. ಆದರೆ, ಸಂಖ್ಯೆಯಲ್ಲಿ ಅವು ಸಣ್ಣದಾದರೂ ಶ್ರೇಷ್ಠತೆಯಲ್ಲಿ ಬಹಳ ದೊಡ್ಡದು. ಪ್ರತಿಯೊಂದೂ ನರಕ ಮೋಚನೆಯ ರಾತ್ರಿಗಳು. ಸಾವಿರ ತಿಂಗಳುಗಳನ್ನು ಮೀರಿಸುವ ಒಂದು ರಾತ್ರಿ ಆ ದಿನಗಳಲ್ಲಿವೆ.

'ಸಾವಿರ ಮಾಸಗಳಿಗಿಂತ ಶ್ರೇಷ್ಠವಾದ ಒಂದು ರಾತ್ರಿ' ಎಂದು ಖುರ್‌ಆನ್ ಬಣ್ಣಿಸಿರುವ ಲೈಲತುಲ್ ಖದ್‌ರ್ ರಮಳಾನಿನ ಯಾವ ರಾತ್ರಿ ಎನ್ನುವುದರ ಬಗ್ಗೆ ಖಚಿತತೆಯಿಲ್ಲದಿದ್ದರೂ ಕೊನೆಯ ಹತ್ತರಲ್ಲಿ, ಅದರಲ್ಲೂ ಬೆಸಸಂಖ್ಯೆಯ ರಾತ್ರಿಗಳಲ್ಲಿ ಹೆಚ್ಚಿನ ನಿರೀಕ್ಷೆಯಿರುವುದು ಹದೀಸುಗಳಿಂದಲೇ ತಿಳಿದು ಬರುತ್ತಿದೆ. ಹಾಗಾಗಿ ನಮ್ಮ ಮುಂದಿರುವ **23,25, 27,29** ರಾತ್ರಿಗಳಲ್ಲಿ ಈ ಸಾಧ್ಯತೆ ಹೆಚ್ಚಿದೆ. ಅದರಲ್ಲೂ **27**ರ ರಾತ್ರಿಗೆ ಮತ್ತಷ್ಟು. ಸ್ವಹಾಬಿಗಳ ಪೈಕಿ ಉಬಯ್ಯ್ ಬಿನ್ ಕಅಬ್ ರಂತಹವರು ಇಪ್ಪತ್ತೇಳನೇ ರಾತ್ರಿ ಖದ್‌ರ್‌ನ ರಾತ್ರಿಯೆಂದು ಅಭಿಪ್ರಾಯ ಪಟ್ಟಿರುವುದನ್ನು ಇಮಾಂ ನವವೀ ತಮ್ಮ ಶರಹು ಮುಸ್ಲಿಂನಲ್ಲಿ ಉಲ್ಲೇಖಿಸಿದ್ದಾರೆ. ಇಮಾಂ ಅಹ್ಮದ್ ರವರು **27**ನೇ ರಾತ್ರಿಯನ್ನು ಬೆಂಬಲಿಸಿದ್ದಾರೆ. 'ಯಾರಾದರೂ ಲೈಲತುಲ್ ಖದ್‌ರನ್ನು ನಿರೀಕ್ಷಿಸುವುದಾದರೆ ಇಪ್ಪತ್ತೇಳನೇ ರಾತ್ರಿ ನಿರೀಕ್ಷಿಸಲಿ' ಎಂಬ ಹದೀಸನ್ನು 'ಫತ್ಹುಲ್ ಬಾರಿ' ಉಲ್ಲೇಖಿಸಿದೆ. ಸಂಖ್ಯಾಶಾಸ್ತ್ರವನ್ನು ಅವಲಂಬಿಸಿಯೂ ಇಪ್ಪತ್ತೇಳನೇ ರಾತ್ರಿಯ ಸಾಧ್ಯತೆಯನ್ನು ಸಂಶೋಧಿಸಿದ ವಿದ್ವಾಂಸರಿದ್ದಾರೆ. ಈ ರಾತ್ರಿಯ ಬಗ್ಗೆ ವಿವರಿಸಿರುವ 'ಸೂರಾ ಖದ್‌ರ್'ನಲ್ಲಿ 'ಹಿಯ' ಎಂಬ ಸರ್ವನಾಮವು ಆ ರಾತ್ರಿಯನ್ನು ಸೂಚಿಸುತ್ತಿದ್ದು, ಇದು ಅಧ್ಯಾಯದ **27**ನೇ ಪದವಾಗಿದೆ. 'ಲೈಲತುಲ್ ಖದ್‌ರ್' ಎಂಬ ಪದದಲ್ಲಿ **9** ಅರಬೀ ಅಕ್ಷರಗಳಿದ್ದು, **3** ಬಾರಿ ಪುನರಾವರ್ತನೆಗೊಂಡಿದೆ. **9**ನ್ನು **3**ಕ್ಕೆ ಗುಣಿಸಿದಾಗ ಬರುವ ಮೊತ್ತ **27** ಆಗಿರುವುದು. ಲೈಲತುಲ್ ಖದ್‌ರ್‌ನ ರಾತ್ರಿಗೆ ಕೆಲವು ಲಕ್ಷಣಗಳನ್ನು ಗ್ರಂಥಗಳಲ್ಲಿ ವಿವರಿಸಲಾಗಿದ್ದು, ಈ ಆಧಾರದಲ್ಲಿ **27**ನೇ ರಾತ್ರಿ ಲೈಲತುಲ್ ಖದ್‌ರ್ ಅನುಭವಕ್ಕೆ ಬಂದಿರುವುದಾಗಿ ಹೇಳಿರುವ ವಿದ್ವಾಂಸರಿದ್ದಾರೆ. ಈಯೆಲ್ಲ ಕಾರಣಗಳಿಂದಾಗಿ **27**ನೇ ರಾತ್ರಿ ಜನಮಾನಸದಲ್ಲಿ ಎಷ್ಟೊಂದು ಪ್ರಭಾವ ಬೀರಿದೆಯೆಂದರೆ, ಆ ರಾತ್ರಿಯನ್ನು ಲೈಲತುಲ್ ಖದ್‌ರ್ ಎಂದೇ ಕರೆಯಲಾಗುತ್ತಿದೆ! ಇಂತಹುದೊಂದು ನಂಬಿಕೆಯು ಆ ರಾತ್ರಿ ಹೆಚ್ಚು ಆರಾಧನೆಗಳಲ್ಲಿ ತೊಡಗಲು ಜನರನ್ನು ಪ್ರರೇಪಿಸುತ್ತಿರುವುದೂ ಸತ್ಯ. ಅಭಿಪ್ರಾಯಗಳು ಅಸಂಖ್ಯ ಇವೆ. ಯಾವುದಕ್ಕೂ ಜೋತು ಬೀಳದೆ ಎಲ್ಲವನ್ನು ಪರಿಗಣಿಸುವುದು ಬುದ್ದಿವಂತಿಕೆ. ಅದರಲ್ಲೂ ಉಳಿದಿರುವ ನಾಲ್ಕೈದು ದಿನಗಳ ಪ್ರತಿಕ್ಷಣವೂ ಅತ್ಯಮೂಲ್ಯವೆ. ಇನ್ನು ಇಂತಹ ದಿನರಾತ್ರಿಗಳು ಬರಬೇಕೆಂದರೆ ವರ್ಷ ಕಳೆಯಬೇಕು. ಅಷ್ಟರಲ್ಲೇ ನಮ್ಮ ಆಯುಷ್ಯವೂ ಮುಗಿದು ಬಿಟ್ಟರೆ ಮುಗಿಯಿತು. ಕೊನೇಕ್ಷಣದಲ್ಲಾದರೂ, ಮುಗಿಬಿದ್ದು ಪುಣ್ಯಗಳಿಸುವ ಪ್ರಯತ್ನ ನಮ್ಮದಾಗಬೇಕು.

ರಮಳಾನನ್ನು ಸರಿಯಾಗಿ ಬಳಸಿಕೊಂಡವರು ಸತ್ಕರ್ಮಗಳ ಮೂಲಕ ಪುಣ್ಯ ಹೆಚ್ಚಿಸಿ ಪಶ್ಚಾತ್ತಾಪದ ಮೂಲಕ ಪಾಪ ಬಗೆಹರಿಸಿದವರು ರಮಳಾನ್ ಮುಗಿಯುವಾಗ ನವಜಾತ ಶಿಶುವಿನ ಪರಿಶುದ್ಧಿ ಪಡೆಯುತ್ತಾರೆ. ನಂತರ ಮತ್ತೆ ಅದನ್ನು ಕೆಡಿಸದೆ ಕಾಪಾಡಿಕೊಳ್ಳುವ ಕಠಿಣ ವ್ರತ ನಮ್ಮದಾಗಬೇಕು.

ರಮಳಾನ್ ಪರಿವರ್ತನೆಯ ತಿಂಗಳು. ಸಾಮಾನ್ಯ ದಿನಚರಿಯೆಲ್ಲ ಬದಲಾಗುವಂತೆ ಬದುಕಿನ ಧಾರ್ಮಿಕ ಮಗ್ಗುಲು ಕೂಡಾ ಪರಿವರ್ತನೆಗೊಳಗಾಗಬೇಕು. ಮುಂದಿನ ಬದುಕಿನ ಪುಟಗಳಲ್ಲಿ ಪುಣ್ಯ ಕರ್ಮಗಳಿಗೆ ಹೆಚ್ಚಿನ ಜಾಗ ಸಿಗಬೇಕು. ಪಾಪಕರ್ಮಗಳಿಗೆ ಜಾಗ ನಿರಾಕರಿಸಬೇಕು. ಮಾಡಿಹೋಗುವ ಪಾಪಗಳನ್ನು ಮಾಯಿಸುತ್ತಿರಬೇಕು. ಮರಣೋತ್ತರ ವಿಚಾರಣೆಯ ವೇಳೆ ಬಲಗೈಯಲ್ಲಿ ಕರ್ಮಪುಸ್ತಕವನ್ನು ಪಡೆಯುವವರಾಗಬೇಕು.

ರಮಳಾನಿನಲ್ಲಿ ನಾವು ಬೆಳೆಸಿದ ಆರಾಧನಾಸಕ್ತಿ, ಆತ್ಮಶುದ್ದಿಗಳನ್ನು ಆ ಬಳಿಕವೂ ಮುಂದುವರಿಸಿದರೆ ಮಾತ್ರ ಮರಣೋತ್ತರ ಯಶಸ್ಸು ಸಾಧ್ಯ. ನಮ್ಮ ಇಸ್ಲಾಮೀ ಜೀವನವು ಒಂದು ತಿಂಗಳಿಗೆ ಮಾತ್ರ ಸೀಮಿತವಾದರಾಗದು. ರಮಳಾನಿನಲ್ಲಿ ಹೆಚ್ಚೆಚ್ಚು ನಮಾಝ್ ನಿರ್ವಹಿಸಿದ್ದೇವೆ. ಉಳಿದ ದಿನಗಳಲ್ಲಿ ಅಷ್ಟು ಸಾಧ್ಯವಾಗದಿದ್ದರೂ ನಮಾಝ್ ಜೊತೆಗಿನ ಸಹವಾಸಬೇಕು. ಕಡ್ಡಾಯ ನಮಾಝ್‌ಗಳನ್ನು ಕರ್ತವ್ಯನಿಷ್ಠೆಯಿಂದ ನಿರ್ವಹಿಸುವುದರೊಂದಿಗೆ ಪ್ರಮುಖ ಸುನ್ನತ್ ನಮಾಝ್‌ಗಳನ್ನು ಅಲ್ಪ ಪ್ರಮಾಣದಲ್ಲಾದರೂ ರೂಢಿಸಿಕೊಳ್ಳಬೇಕು. ಆರಾಧನೆಗಳಲ್ಲಿ ಅತ್ಯುತ್ತಮವಾದುದು ಯಾವುದೆಂದು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ಕೇಳಲಾದಾಗ, "ನಿತ್ಯವೂ ರೂಢಿ ಮಾಡುವ ಆರಾಧನೆ, ಅದು ಅಲ್ಪವಾದರೂ ಸರಿ" ಎಂದವರು ಹೇಳಿದ್ದರು. ರಮಳಾನಿನಲ್ಲಿ ತಿಂಗಳಿಡೀ ವ್ರತಾಚರಿಸಿದ್ದೇವೆ. ಇತರ ದಿನಗಳಲ್ಲೂ ಕೆಲವಾದರೂ ಉಪವಾಸಗಳನ್ನಾಚರಿಸಬೇಕು. ವಾರಂಪ್ರತಿ, ಮಾಸಂಪ್ರತಿ ಹಾಗೂ ವರ್ಷಂಪ್ರತಿ ನಿಗದಿಗೊಳಿಸಲಾದ ಸುನ್ನತ್ ವ್ರತಗಳ ಪೈಕಿ ಪ್ರಮುಖವಾದ ಕೆಲವನ್ನಾದರೂ ಅಭ್ಯಾಸ ಮಾಡಬೇಕು. ಖುರ್‌ಆನ್ ಪಾರಾಯಣ ಖುರ್‌ಆನ್ ಇಳಿದ ತಿಂಗಳಿಗೇ ಮುಗಿಯಬಾರದು. ಅದು ಮುಸ್ಲಿಮರ ಬದುಕಿನ ನಿತ್ಯ ಸಂಗಾತಿಯಾಗಬೇಕು. ದಿನನಿತ್ಯವೂ ಕೆಲವು ನಿಮಿಷಗಳಾದರೂ ಖುರ್‌ಆನ್ ಓದಿಗೆ ವ್ಯಯಿಸುವ ಪರಿಪಾಠ ಬೆಳೆಸಿಕೊಳ್ಳಬೇಕು. ಕನಿಷ್ಠ ಪಕ್ಷ ನಲ್ವತ್ತು ದಿನಕ್ಕೊಮ್ಮೆಯಾದರೂ ಖುರ್‌ಆನ್ ಖತಂ ಮುಗಿಸಬೇಕೆಂದು ಇಮಾಮರುಗಳು ಹೇಳಿದ್ದಾರೆ. ವರ್ಷಕ್ಕೆರಡು ಖತಂ ಕೂಡಾ ಪಠಿಸದವನಿಗೆ ಖುರ್‌ಆನ್‌ನೊಂದಿಗೆ ಋಣಬಾಕಿ ಉಳಿಯುವುದೆಂದು ಅವರು ಎಚ್ಚರಿಸಿದ್ದಾರೆ. ಖುರ್‌ಆನ್ ಪಾರಾಯಣ ಐಹಿಕ ಜೀವನಕ್ಕೆ ಬೆಳಕೂ, ಪಾರತ್ರಿಕ ಬದುಕಿಗೆ ನಿಧಿಯೂ ಆಗಿರುವುದೆಂಬ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ವಚನ ಗಮನಾರ್ಹ.

ಪ್ರಾರ್ಥನೆ ಮತ್ತು ಪಶ್ಚಾತ್ತಾಪ ರಮಳಾನಿನ ಉಪಚಾರವಲ್ಲ, ನಿತ್ಯದ ಆಚಾರವಾಗಬೇಕು. ಅಲ್ಲಾಹು ಸದಾ ಬಯಸುವ ಕರ್ಮಗಳಿವು. ಒಂದೂ ಪಾಪ ಮಾಡಲು ಸಾಧ್ಯವಿಲ್ಲದ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರೇ ದೈನಂದಿನ ಪಾಪ ಮುಕ್ತಿ ಬೇಡುತ್ತಿದ್ದರೆಂದ ಮೇಲೆ ನಾವು? ಪ್ರಾರ್ಥನೆಯೇ ನಮಗಿರುವ ಪ್ರಬಲ ಅಸ್ತ್ರ; ಬಳಸಿಕೊಳ್ಳುತ್ತಿರಬೇಕು. ದಾನಶೀಲತೆ, ಮಸೀದಿಯೊಂದಿಗಿನ ಸಂಪರ್ಕ, ಉದಾರ ವರ್ತನೆ ಇತ್ಯಾದಿಯಾಗಿ ರಮಳಾನಿನಲ್ಲಿ ನಾವು ರೂಢಿಸಿಕೊಂಡ ಸತ್ಕರ್ಮಗಳನ್ನು ರಮಳಾನೋತ್ತರದಲ್ಲೂ ಉಳಿಸಿಕೊಂಡು ಹೋಗಬೇಕು. ರಮಳಾನಿನಲ್ಲಿ ಬೆಳೆಸಿದ ಆತ್ಮ ಚೈತನ್ಯ ಸದಾನಂದದಂತೆ ನೋಡಿಕೊಳ್ಳಬೇಕು. ಅಂತಹುದೊಂದು ದೃಢಪ್ರತಿಜ್ಞೆಗೆ ಸಂದರ್ಭವಾಗಬೇಕೇ ಹೊರತು ಈದ್, ರಮಳಾನಿನಲ್ಲಿ ನಡೆಸಿದ ಧಾರ್ಮಿಕ ಜೀವನದ ಸಮಾಪ್ತಿಯಾಗಬಾರದು. ■

## ಪ್ರವಾದಿ ﷺ ನುಡಿರತ್ನಗಳು

### ಬೀಳ್ಕೊಡುಗೆ

548

**ಮಾಲಿಕ್ ಬಿನ್ ಹುವೈರಿಸ್ ಹೇಳುತ್ತಾರೆ; ನಾವು ಸಮವಯಸ್ಕರಾದ ಹಲವರು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿ ಹೋದೆವು. ಇಪ್ಪತ್ತು ದಿನ ಅವರ ಬಳಿ ತಂಗಿದೆವು. ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಕಾರುಣ್ಯವಂತರೂ ಮೃದು ಮನಸ್ಕರೂ ಆಗಿದ್ದರು. ನಾವು ನಮ್ಮ ಕುಟುಂಬಕ್ಕೆ ಮರಳ ಬಯಸಿದ್ದನ್ನು ಅರಿತ ಅವರು, ನಮ್ಮ ಕುಟುಂಬದಲ್ಲಿ ಯಾರೆಲ್ಲ ಇರುವರೆಂದು ವಿಚಾರಿಸಿದರು. ನಾವು ಅದನ್ನು ತಿಳಿಸಿದೆವು. ಆಗ ಅವರು ಹೇಳಿದರು; ನೀವು ನಿಮ್ಮ ಕುಟುಂಬಕ್ಕೆ ಮರಳಿರಿ. ಅವರೊಂದಿಗೆ ವಾಸಿಸಿರಿ. ಅವರಿಗೆ ಕಲಿಸಿಕೊಡಿರಿ. ಅವರಿಗೆ ಒಳಿತನ್ನು ಬೋಧಿಸಿರಿ. ಇಂತಿಂತಹ ನಮಾಝ್ ಇಂತಿಂತಹ ಸಮಯದಲ್ಲಿ ನಿರ್ವಹಿಸಿರಿ. ಇಂತಿಂತಹ ನಮಾಝ್ ಇಂತಿಂತಹ ಸಮಯದಲ್ಲಿ ನಿರ್ವಹಿಸಿರಿ. ನಮಾಝ್‌ನ ಸಮಯವಾದರೆ ನಿಮ್ಮಲ್ಲೊಬ್ಬರು ಅದ್ಸಾನ್ ನೀಡಬೇಕು. ನಿಮ್ಮ ಪೈಕಿ ದೊಡ್ಡವರು ಇಮಾಂ ಆಗಿ ನಿಲ್ಲಬೇಕು. (ಬುಖಾರಿ, ಮುಸ್ಲಿಂ)**

**ಇನ್ನೊಂದು ವರದಿ: ನಾನು ಹೇಗೆ ನಮಾಝ್ ಮಾಡುವುದನ್ನು ನಾವು ಕಂಡಿರೋ ಅದೇ ರೀತಿ ನೀವು ನಮಾಝ್ ನಿರ್ವಹಿಸಿರಿ. (ಬುಖಾರಿ)**

ಅಲ್‌ಅನ್ಸಾರ್ ರಮಳಾನ್ ವಿಶೇಷಾಂಕ ಬಹಳ ವಿಷಯ ಸಮೃದ್ಧವಾಗಿ ಮೂಡಿ ಬಂದಿದೆ. ರಮಳಾನ್ ಹಾಗೂ ಖುರ್‌ಆನ್‌ಗೆ ಸಂಬಂಧಪಟ್ಟ ಹಲವಾರು ವಿಷಯಗಳನ್ನು ಕಲಿಯುವಂತಾಯಿತು. ಯಶಸ್ಸಿನ ಹತ್ತು ಹೆಜ್ಜೆಗಳು, ಸ್ವರ್ಗದ ಕದ, ವೈಜ್ಞಾನಿಕ ರಹಸ್ಯ, ನೂತನವಾದ, ಟೈಂ ಟೇಬಲ್... ಎಲ್ಲವೂ ಕಲಿಕಾರ್ಹ. 'ಮಳೆ ಖುರ್‌ಆನಿನಲ್ಲಿ' ಉತ್ತಮ ಅಧ್ಯಯನ. ಅಲ್‌ಅನ್ಸಾರ್‌ಗೆ 20 ತುಂಬಿದ ಸಂಭ್ರಮದಲ್ಲಿ ಕೆ.ಎಂ.ಬರೆದ ಅವಲೋಕನ ಅರ್ಥಪೂರ್ಣವಾಗಿತ್ತು. 20 ತುಂಬಿದ ಪತ್ರಿಕೆಗೂ, ವಿಶೇಷಾಂಕಕ್ಕೆ ಮೆರುಗು ತುಂಬಿದ ಲೇಖಕರಿಗೂ ಅಭಿನಂದನೆಗಳು.

**-ಮುಹಮ್ಮದಲೀ ಎಂ.ವೇಣೂರು**

'ಲೌಡ್ ಸ್ಪೀಕರ್, ಸೌಂಡ್ ಕಮ್ಮಿಯಾಗಲಿ' ಪ್ರತೀ ಆಡಳಿತ ಸಮಿತಿ ಮತ್ತು ಇಮಾಮರುಗಳು ಗಮನಿಸಲೇಬೇಕಾದ ಬರಹ. ಪರಿಸರ ಪ್ರಜ್ಞೆಯಿಲ್ಲದೆ ಮೈಕ್ ಬೆಳೆಸುವ ಚಾಳಿ ನಿಲ್ಲಲೇಬೇಕು.

**- ಪಿ.ಎಂ.ರಶೀದ್ ಬೆಳ್ತಂಗಡಿ**

'ಕರ್ಮವಿಲ್ಲದೆ ಪುಣ್ಯಗಳಿಸಲು ಇಲ್‌ತಿಕಾಫ್' ಹಂಝ ಸಖಾಫಿಯವರ ಲೇಖನವು ಇಲ್‌ತಿಕಾಫ್‌ನ ವಿಧಿ ವಿಧಾನಗಳನ್ನು ಚೆನ್ನಾಗಿ ಕಲಿಸಿಕೊಟ್ಟಿತು. ಧನ್ಯವಾದ.

**-ಶರೀಫ್ ಮದನಿ ಪಾಂಡವರಕಲ್ಲು**

### 2011 ವಾರದ ನಮಾಝ್ ವೇಳಾಪಟ್ಟಿ 1432

| | ದಿನಾಂಕ | ಸುಬುಹಿ | ಲುಹರ್ | ಅಸರ್(ಶಾ) | ಅಸರ್(ಹ) | ಮಗ್ರಿಬ್ | ಇಶಾ (ಶಾಫಿ) | ಇಶಾ (ಹನಫಿ) | ಉದಯ |
|---|---|---|---|---|---|---|---|---|---|
| ಆಗಸ್ಟ್ | 16, 17, 18 | 4.56 | 12.38 | 3.45 | 5.00 | 6.55 | 8.08 | 8.17 | 6.18 |
| | 19, 20, 21 | 4.57 | 12.37 | 3.44 | 4.59 | 6.53 | 8.07 | 8.16 | 6.18 |
| | 22, 23, 24 | 4.58 | 12.36 | 3.43 | 4.58 | 6.51 | 8.04 | 8.13 | 6.18 |

ಪ್ರಸ್ತುತ ವೇಳಾಪಟ್ಟಿ ಮಂಗಳೂರು ಕೇಂದ್ರವಾಗಿಟ್ಟುಕೊಂಡು 25 ಕಿ.ಮೀ. ತನಕವಾಗಿದ್ದು ನಂತರ ಪ್ರತಿ 25 ಕಿ.ಮೀ.ಗೆ 1 ನಿಮಿಷದಂತೆ ಸೇರಿಸಿ 100 ಕಿ.ಮೀ. ತನಕ ಉಪಯೋಗಿಸಬಹುದಾಗಿದೆ.

# ವಿದೇಶದಲ್ಲಿದ್ದುಕೊಂಡೇ ಸ್ವದೇಶದಲ್ಲಿ

# ದಅ್‌ವಾ ನಡೆಸುವಿರಾ?

*.... ಕೇರಳಕ್ಕೆ ತಾಗಿ ನಿಂತಿರುವ ಹಾಗೂ ಧಾರ್ಮಿಕ ಸಂಪರ್ಕವಿರುವ ಕರ್ನಾಟಕದ ಜಿಲ್ಲೆಗಳಲ್ಲಿ ಮಾತ್ರ ಇಸ್ಲಾಮ್ ಧರ್ಮದ ಚಿಹ್ನೆಗಳನ್ನು ಕಾಣಬಹುದು. ಇತರ ಜಿಲ್ಲೆಗಳಿಗೆ ನಾವು ಪ್ರವೇಶಿಸಿದಂತೆಲ್ಲಾ ಧಾರ್ಮಿಕವಾಗಿ ಅಧೋಗತಿಯನ್ನೇ ನಮಗೆ ದರ್ಶಿಸಬಹುದಾಗಿದೆ.*

*ಅಲ್ಲಿರುವವರು ಮನುಷ್ಯರಷ್ಟೆ. ಬದುಕಲೋಸ್ಕರ ಕೆಲಸ ಮಾಡುವವರು, ತಿಂದುಣ್ಣುವವರು, ಸುಖಪಡುವವರು. ಇಹಲೋಕದ ಬದುಕಿನ ನಂತರದ ಬಗ್ಗೆ ಅವರಿಗೆ ಅರಿವಿಲ್ಲ. ಅರಿತರೂ ಆ ಬಗ್ಗೆ ಪ್ರಜ್ಞೆ ಇಲ್ಲ. ಹೇಗಿದ್ದರೇನು? ಇರುವಷ್ಟು ದಿನ ಹಾಯಾಗಿರುವುದಷ್ಟೇ ಇವರ ಮನದಿಂಗಿತ.*

*ಇವರಲ್ಲಿ ಮುಸ್ಲಿಮ್ ಹೆಸರಿನವರಿದ್ದರೂ ಇಸ್ಲಾಮಿನ ಆಚರಣೆಗಳಿಲ್ಲ. ಆದರೆ ಇಸ್ಲಾಮೇತರ ಆಚರಣೆಗಳನ್ನೂ, ಸ್ವಯಂ ಘೋಷಿತ ರೀತಿ ರಿವಾಜುಗಳನ್ನೂ ಇಸ್ಲಾಮ್ ಧರ್ಮದ್ದೆಂದೇ ಬಿಂಬಿಸುವಂತೆ ಇಲ್ಲಿನವರು ಮಾಡುತ್ತಿರುವುದು ಮಾತ್ರ ಖೇದಕರ ಸಂಗತಿ.*

*ಹುಬ್ಬಳ್ಳಿಯ ಸಂಡೂರು ಎಂಬಲ್ಲಿನ ಮಸ್ಜಿದ್‌ಗೆ ವಿಸ್ಕಿಯನ್ನು ಹರಕೆ ನೀಡಿದ್ದು ಅರಿತಾಗ ಮನಸ್ಸು ತುಂಬಾ ದುಃಖಿಸಿತು....*

*ಇನ್ನೊಂದೆಡೆ ಕೆಲವರು ಕುದುರೆಯೊಂದನ್ನು ಮಸ್ಜಿದ್‌ಗೆ ಹರಕೆ ಮಾಡಿ, ಅದು ಸತ್ತಾಗ ಅದರ ಸಮಾಧಿಯ ಸುತ್ತಲೂ ಪ್ರದಕ್ಷಿಣೆ ಬರುತ್ತಿದ್ದಾರೆ...*

*ಹೀಗೆ ಎಷ್ಟೊಂದು ಘಟನೆಗಳು...*

*ಇಲ್ಲಿನವರಲ್ಲಿ ತಿಳುವಳಿಕೆ ಮೂಡಿಸಲು ಕರ್ನಾಟಕ ರಾಜ್ಯ SSF ಅಧೀನದ IHSAN ತಂಡವು ಕಳೆದ ನಾಲ್ಕು ವರ್ಷಗಳಲ್ಲಿ ದುಡಿಯುತ್ತಿದೆ. ಈ ತನಕದ ರಮಳಾನ್ ತಿಂಗಳಲ್ಲಿ ಸುಮಾರು ನಲವತ್ತರಷ್ಟು ಕಾರ್ಯಕರ್ತರು ಅಲ್ಲಿಗೆ ತೆರಳಿ ಧರ್ಮ ಬೋಧನೆಗಾಗಿ ಕಾರ್ಯಾಚರಿಸುತ್ತಿದ್ದವರು ಈ ಸಲ ನೂರು ಕಾರ್ಯಕರ್ತರು ಸಿದ್ಧರಾಗಿದ್ದಾರೆ.*

*ಆದರೆ ರಮಳಾನ್ ಮುಗಿದಾಗ ಇವರೆಲ್ಲರೂ ವಾಪಾಸು ಬರುವ ಕಾರಣ ಅಲ್ಲಿನ ಜನರಲ್ಲಿ ಬೆರೆತು ವರ್ಷವಿಡೀ ಬೋಧಿಸಲು ಖಾಯಂ ಬೋಧಕರನ್ನು ನೇಮಕ ಮಾಡಬೇಕಾಗಿದೆ. ಸದ್ಯ ಕರಾಯದ ಕೆ.ಎಂ.ಮರ್ಶದ್ ಹುಮೈದಿಯವರು ದುಡಿಯುತ್ತಿದ್ದಾರೆ. ಅಲ್‌ಹಮ್ದುಲಿಲ್ಲಾಹ್...*

*ಇದರ ಜತೆಗೇ...*

*ಅಲ್ಲಿ ಮೊಳಕೆಯೊಡೆಯುತ್ತಿರುವ ಧಾರ್ಮಿಕತೆಯನ್ನು ಉಳಿಸಿ, ಪೋಷಿಸಿ, ಬೆಳೆಸಲು ಆ ಊರುಗಳಲ್ಲಿ ಮದ್ರಸಾಗಳನ್ನು ನಿರ್ಮಿಸುವುದು, ರಮಳಾನ್ ತಿಂಗಳಲ್ಲಿ ದಾಇಗಳನ್ನು ನೇಮಿಸುವುದು, ಅಲ್ಲಿನ ಮನೆಗಳಿಗೆಲ್ಲಾ ಉಚಿತವಾಗಿ ಅಲ್ ಅನ್ಸಾರ್ ಪತ್ರಿಕೆಗಳನ್ನು ಹಂಚುವುದು, ಮುಂತಾದ ವ್ಯವಸ್ಥೆಗಳನ್ನು ಮಾಡುವುದಾಗಿದೆ ನಮ್ಮ ಮೊದಲ ಗುರಿ.*

*ಇದಕ್ಕಾಗಿ ಕೊಡುಗೈ ದಾನಿಗಳಿಂದ, ಸಹೃದಯಿ ಕಾರ್ಯಕರ್ತರಿಂದ, ಉದಾರ ಮನಸ್ಕರಿಂದ ನೆರವನ್ನು ಕೋರುತ್ತಿದ್ದೇವೆ.*

| | |
|---|---|
| ಮದರಸ ನಿರ್ಮಾಣ | 1500 ದಿರ್ಹಂ |
| ದಾಇಗಳಿಗೆ ಗೌರವ ಧನ | 400 ದಿರ್ಹಂ |
| ಅಲ್ ಅನ್ಸಾರ್ 10 ಚಂದಾ | 250 ದಿರ್ಹಂ |

| ಆಸಕ್ತರು ಈ ಕೆಳಗಿನ ಹಿತೈಷಿಗಳನ್ನು ಸಂಪರ್ಕಿಸಿರಿ | |
|---|---|
| ಮಂಗಳೂರು | ಜಿ.ಎಂ.ಮುಹಮ್ಮದ್ ಕಾಮಿಲ್ ಸಖಾಫಿ<br>0091 94484 09049 |
| ಸೌದಿ ಅರೇಬಿಯಾ | ಹಾಫಿಳ್ ಜಿ.ಎಂ.ಸುಲೈಮಾನ್ ಹನೀಫೀ ಜಿದ್ದಾ<br>00966 508 666 833 |
| ಯು.ಎ.ಇ | ಮುಹಮ್ಮದ್ ಇಖ್‌ಬಾಲ್ ಕಾಜೂರು<br>00971 557 687 004 |
| | ಕೆ.ಎಂ.ಮುಹಮ್ಮದ್ ಶಹೀರ್ ಕರಾಯ<br>00971 554 404 751 |
| ಕತಾರ್ | ಅಬ್ದುರ್ರಹೀಮ್ ಸಅದಿ ಪಾಣೆಮಂಗಳೂರು<br>0097 455 364 859 |
| ಬಹರೈನ್ | ಎಸ್.ಎಂ.ಫಾರೂಖ್ ಕುಂಬ್ರ<br>0097 338 375 247 |
| ಕುವೈತ್ | ಪಿ.ಪಿ.ಅಬ್ದುಲ್ ಹಮೀದ್ ಕಾಶಿಪಟ್ನ<br>0096 565 520 784 |

# ಭಿಕ್ಷೆಯನ್ನು ಬೆಂಬಲಿಸಬೇಕೇ?

ರಮಳಾನ್ ಬಂತೆಂದರೆ ಹರಕು ಮುರುಕು ಬಟ್ಟೆ ತೊಡಿಸಿದ ಮಹಿಳೆಯರು,ವೃದ್ಧರು, ಮಕ್ಕಳು ಹೆಚ್ಚಾಗಿ ಅಲ್ಲಲ್ಲಿ ಕಾಣ ಸಿಗುತ್ತಾರೆ. ಇವರು ಮಸೀದಿಗಳಲ್ಲಿಯೂ ಅಂಗಡಿಯ ಬಾಗಿಲುಗಳಲ್ಲಿಯೂ, ಮನೆ ಕಂಪೌಂಡ್‌ನಲ್ಲೆಲ್ಲಾ ಹಣಕ್ಕಾಗಿ ಜನರನ್ನು ಪೀಡಿಸುವ ದೃಶ್ಯ ಇತ್ತೀಚಿನ ದಿನಗಳಲ್ಲಿ ಸರ್ವೇ ಸಾಮಾನ್ಯ. ಹಳೆಯ ಟೋಪಿ, ಹಸಿರು ಶಾಲು, ಹರುಕು ಮುರುಕು ಬುರ್ಖಾ ಇದೆಲ್ಲಾ ಭಿಕ್ಷೆಯ ಐಡೆಂಟಿಫಿಕೇಶನ್ ಎಂದು ತಿಳಿದಿದ್ದಾರೆ ಇವರು. ಇವರಲ್ಲಿ ಹೆಚ್ಚಿನವರು ರಮಳಾನ್ ಪ್ರಾರಂಭದಲ್ಲಿ ದೂರದ ಊರುಗಳಿಂದ ಕುಟುಂಬ ಸಮೇತ ಬಂದು ಬೇಕಾದಷ್ಟು ಯಾಚಿಸಿ ಪವಿತ್ರ ತಿಂಗಳ ಕೊನೆಯಲ್ಲಿ ಗಂಟು ಮೂಟೆ ಕಟ್ಟಿ ಹೊರಟು ಬಿಡುವವರು. ಎಲ್ಲೆಲ್ಲಿಂದಲೋ ಬರುವ ಈ ಮಂದಿಗಳು ಯಾವ ಧರ್ಮದವರು, ಜಾತಿಯವರು, ಕುಲ ಗೋತ್ರದವರೆಂದು ಸುಲಭದಲ್ಲಿ ತಿಳಿದು ಬರುವುದಿಲ್ಲ. ಭಿಕ್ಷುಕರ ಈ ಗುಂಪಿನಲ್ಲಿ ಮುಸ್ಲಿಮೇತರರು ಇದ್ದರೂ ಅಚ್ಚರಿಗೊಳ್ಳಬೇಕಾಗಿಲ್ಲ. ಒಟ್ಟಿನಲ್ಲಿ ರಂಝಾನ್ ತಿಂಗಳಲ್ಲಿ ಕಂಡು ಬರುವ ಈ ರೀತಿಯ ಭಿಕ್ಷಾಟನೆಯು ಮುಸ್ಲಿಂ ವಲಯದಲ್ಲಿ ಆತಂಕವನ್ನು ಸೃಷ್ಟಿಸಿದೆಯಲ್ಲದೆ ಸಂಶಯವನ್ನು ಹುಟ್ಟು ಹಾಕಿದೆ.

ಮಂಗಳೂರಿನಂತಹ ಸಿಟಿ ಏರಿಯಾದಲ್ಲಿ ವ್ಯಾಪಕವಾಗಿರುವ ಈ ಭಿಕ್ಷಾಟನೆಯ ಹಿಂದೆ ಭಿಕ್ಷಾಟನೆ ಮಾಫಿಯಾಗಳೆಂಬ ಕಾಣದ ಕೈಗಳು ಕೆಲಸ ಮಾಡುತ್ತಿರಬಹುದು. ಭಿಕ್ಷೆಯನ್ನು ವೃತ್ತಿ ಮಾಡಿದವರನ್ನು ದುರ್ಬಳಕೆ ಮಾಡಿ ಈ ಪವಿತ್ರ ತಿಂಗಳಲ್ಲಿ ಭಿಕ್ಷಾಟನಾ ಮಾಫಿಯಾ ಸಾಕಷ್ಟು ಸಂಪಾದಿಸುತ್ತದೆ. ನಿರ್ದಿಷ್ಟ ಸ್ಥಳಗಳನ್ನು ಗುರುತಿಸಿ, ಅಲ್ಲಿ ಇಷ್ಟು ಮಂದಿಯೆಂದು ನಿಗದಿಪಡಿಸಿ ಭಿಕ್ಷಾಗಳಿಕೆಯಲ್ಲಿ ಬರುವ ಹೆಚ್ಚಿನ ಭಾಗವನ್ನು ತಮ್ಮ ಜೇಬಿಗೆ ಹಾಕಿಕೊಂಡು ಭೂಗತವಾಗುತ್ತದೆ ಈ ಮಾಫಿಯಾಗಳು. ಭಿಕ್ಷಾಟನೆಗೆ ಬೇಕಾದ ಎಲ್ಲಾ ಗೈಡ್‌ಲೈನ್‌ಗಳೂ ತರಬೇತುಗಳೂ ಭಿಕ್ಷುಕರಿಗೆ ಮಾಫಿಯಾಗಳು ನೀಡುತ್ತಾರೆ. ದಯನೀಯ ಸ್ಥಿತಿ ಸೃಷ್ಟಿಸಿ ಜನರ ಗಮನ ಪಡೆಯುವಂತೆ ಮಾಡಬೇಕಾದ ಎಲ್ಲಾ ಟ್ರೈನಿಂಗ್‌ಗಳೂ ಮಾಫಿಯಾಗಳಿಂದ ಪಡೆದಿರುತ್ತಾರೆ.

ಹಾಫಿಳ್ ತೌಸೀಫ್ ಪಾಣೆಮಂಗಳೂರು

ಎಲ್ಲರೂ ಗೌರವದಿಂದ ಕಾಣುವ ಪವಿತ್ರ ತಿಂಗಳಲ್ಲಿ ಭಿಕ್ಷುಕರ ಈ ರೀತಿಯಾದ ವರ್ತನೆಯು ಮುಸ್ಲಿಂ ಸಮಾಜಕ್ಕೆ ಕಳಂಕ ತರುವಂತಿದೆ. ಅನ್ಯ ಧರ್ಮೀಯರು ರಮಳಾನ್ ಎಂದರೆ ಭಿಕ್ಷೆಯ ಮಾಸವೆಂದು ತಪ್ಪು ತಿಳೆಯುವಷ್ಟು ವ್ಯಾಪಕಗೊಂಡಿದೆ ಈ ಭಿಕ್ಷಾಟನೆ. ಇಸ್ಲಾಂ ಒಮ್ಮೆಯೂ ಭಿಕ್ಷಾಟನೆಯನ್ನು ಪ್ರೋತ್ಸಾಹಿಸಿದ ಧರ್ಮವಲ್ಲ. ಭಿಕ್ಷುಕನ ಕೈಯಲ್ಲಿ ಕೆಲಸದ ಉಪಕರಣಗಳನ್ನು ನೀಡಿ ಇನ್ನು ಮುಂದೆ ಯಾಚಿಸಬಾರದೆಂದು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿವ ಸಲ್ಲಮರು ತಾಕೀತು ಮಾಡಿದ ಚರಿತ್ರೆ ನಮ್ಮ ಮುಂದಿದೆ. ಭಿಕ್ಷಾಟನೆಯನ್ನು ನಿರುತ್ಸಾಹಪಡಿಸುವ ಆಯತುಗಳು, ಹದೀಸ್‌ಗಳು ಪಂಡಿತ ವಚನಗಳು ಕಡಿಮೆಯೇನಲ್ಲ. "ಭಿಕ್ಷೆಯ ಬಾಗಿಲನ್ನು ಯಾರು ತೆರೆಯುವರೋ ಅವರಿಗೆ ಅಲ್ಲಾಹನು ದಾರಿದ್ರ್ಯದ ಬಾಗಿಲನ್ನು ತೆರೆಯುತ್ತಾನೆಂಬ" ಪ್ರವಾದಿ ಸ್ವಲ್ಲಲ್ಲಾಹು ಅಲೈಹಿವ ಸಲ್ಲಮರವರ ರತ್ನ ನುಡಿಯು ಇಸ್ಲಾಮಿನ ಸ್ಪಷ್ಟವಾದ ಭಿಕ್ಷೆ ವಿರೋಧಿ ನಿಲುವಿಗೆ ಹೆಚ್ಚಿನ ಪುಷ್ಟಿಯನ್ನು ನೀಡುತ್ತದೆ. ಆದರೆ ಇಸ್ಲಾಮಿನ ಬಾಲ ಪಾಠವರಿಯದೆ ಹನ್ನೊಂದು ತಿಂಗಳುಗಳಲ್ಲಿಯೂ ಧರ್ಮಭ್ರಷ್ಟರಾಗಿ ಜೀವಿಸುವ ಕೆಲವರು ರಮಳಾನ್ ತಿಂಗಳಲ್ಲಿ ಗಡ್ಡ, ತಲೆಗೆ ಟೋಪಿ, ಮುಂಡಾಸು ಕಟ್ಟಿ ಜನರ ಮುಂದೆ ಪ್ರತ್ಯಕ್ಷರಾಗುತ್ತಾರೆ. ಇನ್ನು ಕೆಲವರು ಮುಸ್ಲಿಯಾರ್ ವೇಷ ಹಾಕಿ ಮನೆ ಕಟ್ಟಲು, ಮಗಳ ಮದುವೆ ಮುಂತಾದ ಸುಳ್ಳು ನೆಪಗಳನ್ನು ಹೇಳಿ ಶ್ರೀಮಂತರ ಬೆನ್ನು ಹತ್ತುತ್ತಾರೆ.

ಮನುಷ್ಯನು ಎಷ್ಟೇ ಕಷ್ಟ ಬಂದರೂ ಆತ್ಮ ಗೌರವ ಮತ್ತು ಸ್ವಾಭಿಮಾನವನ್ನು ಉಳಿಸಿಕೊಳ್ಳಲು ಪ್ರಯತ್ನಿಸಬೇಕು. ಭಿಕ್ಷೆ ಬೇಡದೆ ಅನ್ಯ ಮಾರ್ಗವಿಲ್ಲ ಎಂದಾದರೆ ಒಪ್ಪೊತ್ತಿನ ಊಟಕ್ಕೆ ಮಾತ್ರ ಸಹಾಯ ಯಾಚನೆ ಮಾಡಬಹುದೇ ಹೊರತು ಭಿಕ್ಷೆಯನ್ನು ವೃತ್ತಿಯನ್ನಾಗಿ ಮಾಡಿಕೊಳ್ಳುವುದು ಧರ್ಮದ ನೀತಿಯಲ್ಲ. ಈ ರೀತಿಯ ಭಿಕ್ಷಾಟನೆಯಿಂದ ಅರ್ಹ ಕಲೆಕ್ಷನ್‌ನವರೂ ವಂಚಿತರಾಗಿ ತೊಂದರೆಗೊಳಪಡುತ್ತಾರೆ. ರಮಳಾನಿನ ಹಗಲಲ್ಲಿ ಜನರ ಕಣ್ಣು ತಪ್ಪಿಸಿ ಬೀಡಿ ಸೇದುವವರೂ, ನೀರು ಕುಡಿಯುವವರೂ, ಕಡ್ಡಾಯ ಕರ್ಮಗಳನ್ನು ಮಾಡದವರೂ ಈ ಭಿಕ್ಷಾಟನೆಯಲ್ಲಿದ್ದಾರೆ. ಕಡ್ಡಾಯವಾದ ನಮಾಝನ್ನು ಮಾಡದವನಿಗೆ ಭಿಕ್ಷೆ ನೀಡಬಾರದೆಂಬ ಇಮಾಂ ಗಝ್ಝಾಲಿ ﷺ ರವರ ಮಾತು ಉಲ್ಲೇಖನೀಯ.

ನಾವು ಕಾಣುವ 'ಸ್ಪೆಷಲ್ ಬೆಗ್ಗರ್ಸ್'ಗಳ ಸಂಖ್ಯೆ ವೃದ್ಧಿಸಲು ಹಲವು ಕಾರಣಗಳಿವೆ. ಕೆಲವು ಧನಿಕರು ಝಕಾತ್ ಸರಿಯಾಗಿ ನೀಡುವುದಿಲ್ಲ ಎಂಬುವುದು ಮುಖ್ಯ ಸಬೂಬುಗಳಲ್ಲೊಂದು. ರಮಳಾನ್ 27 ರಂದು ತೋರಿಕೆಗೋಸ್ಕರ ಕೆಲವರನ್ನು 'ಕ್ಯೂ' ನಿಲ್ಲಿಸಿ ಒಂದಿಷ್ಟು ಚಿಲ್ಲರೆ ಹಣ  ಚೆಲ್ಲಿದಷ್ಟಕ್ಕೆ ಮಾತ್ರ ಝಕಾತ್ ಸಂಪೂರ್ಣವಾಗಿ ನೀಡಿದವನಾಗುವುದಿಲ್ಲ. ಜನರಿಗೆ ಉಪಕಾರಕ್ಕೆ ಬರುವ ರೀತಿಯಲ್ಲಿ ದೊಡ್ಡ ಸಂಖ್ಯೆಗಳಲ್ಲಿ ದಾನ ನೀಡಲು ಶ್ರೀಮಂತರು ಮುಂದಾಗಬೇಕು. ಈ ವರ್ಷ ಝಕಾತನ್ನು ಪಡೆಯುವ ಬಡವ ಬರುವ ವರ್ಷ ಝಕಾತ್ ನೀಡುವವನಾಗಿ ಪರಿವರ್ತನೆಗೊಳ್ಳಬೇಕು. ಬಡವ ಕಾಲದುದ್ದಕ್ಕೂ ಬಡವನಾಗಿಯೇ ಉಳಿಯುವ ಈಗಿನ ವ್ಯವಸ್ಥೆಯು ಬದಲಾಗಬೇಕು. ಹಾಗಾದರೆ ಉಮರುಬ್‌ನು ಅಬ್ದುಲ್ ಅಝೀಝ್ ﷺ ರವರು ಝಕಾತಿನ ಮೂಲಕ ಉಂಟುಮಾಡಿದ ಕ್ರಾಂತಿಯು ನಮ್ಮ ಸಮಾಜದಲ್ಲಿಯೂ ಮರುಕಳಿಸಬಹುದು.

ಶ್ರೀಮಂತ ವಿಭಾಗವು ಸಾಮಾಜಿಕ ಜವಾಬ್ದಾರಿಯಿಂದ ಜಾರುವುದನ್ನು ನಿಲ್ಲಿಸಿ ಸಮಾಜದ ಏಳಿಗೆಗೋಸ್ಕರ ಎಲ್ಲ ಕೆಲಸಕಾರ್ಯಗಳಲ್ಲಿಯೂ ಕೈ ಜೋಡಿಸುವುದು ಅತ್ಯಗತ್ಯ. ಝಕಾತ್‌ನ ಧನವು ನೇರವಾಗಿ ಮನೆ ತಲುಪುವಂತೆ ಮಾಡಿದರೆ ಭಿಕ್ಷೆಯ ಈ ಹಾವಳಿಯನ್ನು ಸ್ವಲ್ಪ ಮಟ್ಟಿಗೆ ನಿಯಂತ್ರಿಸಬಹುದು. ಮಾತ್ರವಲ್ಲ ಅರ್ಹರಾರು, ಸೋಮಾರಿಗಳಾರು ಎಂದು ಬಲು ಸುಲಭವಾಗಿ ಗುರುತಿಸಬಹುದು. ಉಳಿದವರಂತೆ ಭಿಕ್ಷುಕರು ಕೂಡಾ ರಮಳಾನ್ ತಿಂಗಳಲ್ಲಿ ಉಪವಾಸ ಹಿಡಿಯಲು, ನಮಾಝ್ ಮಾಡಲು, ಖುರ್‌ಆನ್ ಓದಲು ಸಹಾಯಕಾರಿಯಾಗಬಹುದು. ರಮಳಾನಿನ ಗೌರವ ಕಾಪಾಡಿದ ಪುಣ್ಯಕ್ಕೆ ಕೂಡಾ ಹೇತುವಾದೀತು.

ರಮಳಾನ್ ಬಿಡುವಿನಲ್ಲಿ ಮುತಅಲ್ಲಿಮರು ಮಸೀದಿಗಳಲ್ಲಿ ಭಾಷಣಕ್ಕೆ ಹೋಗುವುದು ವಾಡಿಕೆ. ಹೀಗೆ ಮುತಅಲ್ಲಿಮರು ಭಾಷಣ ಮಾಡಿ ಹಣ ಪಡೆಯುವುದರ ಕುರಿತು ಭಿಕ್ಷೆಯಲ್ಲವೇ ಎಂದು ಕೇಳುವವರಿದ್ದಾರೆ. ದರ್ಸಿನಲ್ಲಿ ಪ್ರತೀ ವರ್ಷವೂ ಕಲಿತ ಧಾರ್ಮಿಕ ವಿದ್ಯೆಯನ್ನು ಜನರಿಗೆ ತಲುಪಿಸುವ ಉತ್ತಮ ಮಾಧ್ಯಮ ಈ 'ವಾಝ್' ಎಂದು ಅವರಿಗೆ ಮನವರಿಕೆ ಮಾಡಿಕೊಡುವುದು ಅಗತ್ಯವಾಗಿದೆ. ಅಲ್ಲದೆ ಜನರ ಮುಂದೆ ನಿಂತು ಭಾಷಣವನ್ನು ಕಲಿಯಲು ಉತ್ತಮ ವೇದಿಕೆಯೂ ಹೌದು. 'ವಾಳ್'ನ ನಂತರ ಬಡ ಮುತಅಲ್ಲಿಮನಿಗೆ ಸಿಗುವ ಚಿಲ್ಲರೆ ಹಣವು ಮುಂದಿನ ಅಧ್ಯಯನ ವರ್ಷಕ್ಕೆ ಅವಶ್ಯವಾದ ಕಿತಾಬ್‌ಗಳು, ಪುಸ್ತಕಗಳು, ವಸ್ತ್ರಗಳ ಖರೀದಿಗೆ ಸಹಕಾರಿಯಾಗುತ್ತದೆ. ಮುತಅಲ್ಲಿಮರು ಕ್ಷೀಣಿಸುತ್ತಿರುವ ಈ ಕಾಲಘಟ್ಟದಲ್ಲಿ ಅವರಿಗೆ ಸಹಾಯ ಹಸ್ತ ಚಾಚಿ ಪ್ರೋತ್ಸಾಹಿಸುವುದು ನಮ್ಮ ಕರ್ತವ್ಯವೇ ಹೊರತು ಅದು ಭಿಕ್ಷೆಗೆ ಪ್ರೋತ್ಸಾಹ ಕೊಟ್ಟಂತೆ ಖಂಡಿತಾ ಆಗುವುದಿಲ್ಲ. ಈಗ ಕಾಣುವ ಭಾಷಣಗಾರರಲ್ಲಿ ಬಹಳ ಮಂದಿ ರಮಳಾನ್‌ನಲ್ಲಿ ಮಸೀದಿಗಳಲ್ಲಿ ಹೀಗೆ 'ವಅಳ್' ಮಾಡುತ್ತಾ ಬೆಳೆದು ಬಂದವರಾಗಿದ್ದಾರೆಂಬುದು ಸ್ಮರಣೀಯ. ■




## ಅಭಿನಂದನೆಗಳು



ಅಬ್ದುಲ್ ಕರೀಂ ಎಂ.
ಪ್ರಥಮ



ಮುಹಮ್ಮದ್ ರಫೀಖ್ ಎಂ.ಕೆ.
ದ್ವಿತೀಯ

ಅಖಿಲ ಭಾರತ ಸುನ್ನೀ ವಿದ್ಯಾಭ್ಯಾಸ ಮಂಡಳಿಯು ದೇಶ ವಿದೇಶಗಳಲ್ಲಿರುವ ಸಾವಿರಾರು ಮದ್ರಾಸಗಳಲ್ಲಿ ನಡೆಸಿದ ಪಬ್ಲಿಕ್ ಪರೀಕ್ಷೆಯಲ್ಲಿ ಕರ್ನಾಟಕದ ವಿದ್ಯಾರ್ಥಿಗಳು ಉತ್ತಮ ಸಾಧನೆದಾಖಲಿಸಿದ್ದಾರೆ. ಹೈಯರ್ ಸೆಕಂಡರಿ (ಪ್ಲಸ್‌ಟು) ಮಟ್ಟದ ಪಬ್ಲಿಕ್ ಪರೀಕ್ಷೆಯಲ್ಲಿ ಮೊದಲ ಎರಡೂ ಸ್ಥಾನಗಳು ಕರ್ನಾಟಕದ ಪಾಲಾಗಿವೆ. ದಕ್ಷಿಣ ಕನ್ನಡದ ಪುತ್ತೂರು ರೇಂಜ ಖುವ್ವತುಲ್ ಇಸ್ಲಾಂ ಮದ್ರಸಾದ ಅಬ್ದುಲ್ ಕರೀಂ ಎಂ. ಪ್ರಥಮ ಸ್ಥಾನವನ್ನೂ, ಇದೇ ಮದ್ರಸಾದ ಮುಹಮ್ಮದ್ ರಫೀಖ್ ಎಂ.ಕೆ. ದ್ವಿತೀಯ ಸ್ಥಾನವನ್ನೂ ಪಡೆಯುವ ಮೂಲಕ ಇದೇ ಮೊದಲ ಬಾರಿ ಎರಡೂ ರ್‍ಯಾಂಕ್‌ಗಳು ಕರ್ನಾಟಕಕ್ಕೆ, ಅದರಲ್ಲೂ ಒಂದೇ ಮದ್ರಾಸಕ್ಕೆ ತಂದು ದಾಖಲೆ ನಿರ್ಮಿಸಿದ್ದಾರೆ.

ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳು ಹಾಗೂ ಸಾಧನೆಗೆ ಕಾರಣರಾದ ಶಿಕ್ಷಕ ಅಬ್ದುಲ್ ಜಲೀಲ್ ಸಖಾಫಿ ಜಾಲ್ಸೂರು ಹಾಗೂ ಆಡಳಿತ ಸಮಿತಿಯನ್ನು ಅಭಿನಂದಿಸುವ,

**ಎ.ಕೆ.ಅಬೂಬಕರ್ ಸಖಾಫಿ ಅಜ್ಜಿಕಲ್ಲು** ಖತೀಬರು, ಉಜಿರೆಬೆಟ್ಟು

# ನಿನ್ನ ಮಕ್ಕಳು ನಿನ್ನ ನಾಶವಾಗದಿರಲಿ



22

لاَ تَحْسَبَنَّ ذَوِي الْقُرْبَى تُعِينُ كَمَا
تُعِينُ غَيْرُهُمْ وَالْقَصْدُ يَقْضِيهِ
وَالسَّقْمُ يَحْدُثُ مِنْ نَفْسٍ وَيَقْتُلُهَا
دَوَآؤُهُ مِنْ جِبَالِ الْبُعْدِ يَشْفِيهِ

*ಹೊರಗಿನವರಿಗಿಂತ ಹೆಚ್ಚಾಗಿ ನಿನ್ನ ಕುಟುಂಬದವರೇ ನಿನಗೆ ಸದಾ ಸಹಾಯ ಮಾಡುವವರೆಂದು ನೀನು ನಂಬಿ ಕೂರಬೇಡ. ರೋಗವು ನಿನ್ನ ಶರೀರದಿಂದಲೇ ಉಂಟಾಗುತ್ತದೆ. ಹಾಗೂ ಕೆಲವೊಮ್ಮೆ ಶರೀರವನ್ನು ಕೊಂದು ಹಾಕುತ್ತದೆ. ದೂರದ ಪರ್ವತದ ಗಿಡ ಮೂಲಿಕೆ ಅದರ ಶಮನಕ್ಕೆ ಬರುತ್ತದೆ.*

ಕಷ್ಟದ ವೇಳೆ ಸಹಾಯಕ್ಕೆ ಸಿಗದ ಕುಟುಂಬದ ಬಂಧುಗಳನ್ನು ನಂಬಿ ಕೂರುವವನಿಗೆ ನೀಡುವ ಹಿತವಚನವಿದು. ಕುಟುಂಬದವರು ಎಂಬ ಕಾರಣದಿಂದ ಮಾತ್ರ ಅವರು ನಿನ್ನ ಸಹಾಯಕ್ಕೆ ಬರಬೇಕೆಂದಿಲ್ಲ. ಕೆಲವೊಮ್ಮೆ ಕುಟುಂಬದ ಹೊರಗಿನವರೇ ಹೆಚ್ಚು ಸಹಾಯಕ್ಕೆ ಸಿಗುತ್ತಾರೆ. ಕುಟುಂಬದ ನಡುವೆ ಪ್ರೀತಿ ಒಡನಾಟಗಳು ಇಲ್ಲವಾದರೆ, ಪರಸ್ಪರ ದ್ವೇಷ ಅಸೂಯೆಗಳು ತುಂಬಿದ್ದರೆ ಪರಸ್ಪರ ಕಷ್ಟಗಳಿಗೆ ಅಲ್ಲಿ ಸ್ಪಂದನ ವಿರುವುದಿಲ್ಲ. ಅದೇ ವೇಳೆ ಹೊರಗಿನ ವ್ಯಕ್ತಿಗಳೊಂದಿಗೆ ಇಂತಹ ದ್ವೇಷ ಅಸೂಯೆಗಳಿಗೆ ಹೆಚ್ಚು ಕಾರಣಗಳಿರುವುದಿಲ್ಲ. ಪ್ರೀತಿ ಹೆಚ್ಚು ಕಾಲ ಉಳಿಯಬಲ್ಲುದು. ಆದ್ದರಿಂದ ಅಸೂಯೆ ತುಂಬಿದ ಕುಟುಂಬ ಬಂಧುಗಳಿಗಿಂತ ಪ್ರೀತಿ ತುಂಬಿದ ಹೊರಗಿನವನೇ ಹೆಚ್ಚು ಸಹಾಯಕ್ಕೆ ಸಿಗುತ್ತಾನೆ. ಕವಿ ವರ್ಯರು ಇದಕ್ಕೆ ನೀಡಿದ ಉದಾಹರಣೆ ಉತ್ತಮವಾದುದು. ಶರೀರದ ಯಾವುದೇ ಬಾಹ್ಯ ಯಾ ಆಂತರಿಕ ಭಾಗಗಳಿಗೆ ಕೇಡು ಸಂಭವಿಸಿ ಉಂಟಾಗುವ ರೋಗವು ಶರೀರದ ನಾಶಕ್ಕೆ ಹೇತುವಾಗಬಹುದು. ಈ ರೋಗ ಶರೀರದಿಂದಲೇ ಉಂಟಾಗುತ್ತದೆ. ಹೊರಗಿನ ಪರ್ವತದ ಮದ್ದು ಶರೀರದ ಈ ಕಷ್ಟವನ್ನು ನಿವಾರಿಸಲು ಬರುತ್ತದೆ. ಒಳಗಿನವನಿಗಿಂತ ಹೊರಗಿನವನೇ ಇಲ್ಲಿ ಆಪತ್ಬಾಂಧವನಾಗುತ್ತಾನೆ.

ಎಲ್ಲ ಕುಟುಂಬಗಳೂ ಹೀಗೆ ತಮ್ಮವರನ್ನು ಗಮನಿಸುವುದಿಲ್ಲವೆಂದು ಇದಕ್ಕರ್ಥವಿಲ್ಲ. ಕುಟುಂಬದ ಸಮಸ್ಯೆಗಳಿಗೆ ಆದ್ಯತೆ ನೀಡಿ, ಅವರಲ್ಲಿರುವ ಬಡವರನ್ನು ಪ್ರತ್ಯೇಕ ಗಮನಿಸುವ ಧಾರಾಳ ಮಂದಿಯಿದ್ದಾರೆ. ಅದೇ ವೇಳೆ ಸ್ವಂತ ಸಹೋದರ-ಸಹೋದರಿಯರ ಕಷ್ಟಗಳನ್ನೂ ಗಮನಿಸದೆ 'ತನ್ನದಾಯಿತು' ಎಂದು ಕೂರುವವರೂ ಇದ್ದಾರೆ. ಕುಟುಂಬದೊಳಗೆ ಇತರರ ಕಷ್ಟವನ್ನು ಕಂಡು ಸಂತಸಪಡುವ, ಇತರರ ಬೆಳವಣಿಗೆಗೆ ಅಡ್ಡಿಪಡಿಸುವ ಮನೋಭಾವ ವಿರುವವರು ಅವರ ಸಹಾಯ ಸಹಕಾರಗಳಿಗೆ ನಿಲ್ಲುವುದಿಲ್ಲ. ಮೇಲಿನ ಕವನ ಸಾಲುಗಳು ಇಂತಹವರ ಬಗ್ಗೆಯಾಗಿದೆ.

لَيْسَ الْقَرِيبُ قَرِيبًا فِي غِنَاكَ كَمَا
حَفَّتْ غَدِيرًا وَفِيهِ الْحُوتُ اَطْيَارُ
بَلْ لَازَمَنَّكَ فِي فَقْرٍ وَفِي سَعَةٍ
كَمَا يَدُومُ بِهِ لِنَوْفَرٍ جَارُ

*ನಿನ್ನ ಸಿರಿತನದ ವೇಳೆ ಮಾತ್ರ ನಿನಗೆ ನಿಕಟವಾಗಿರುವವನು ನಿಜವಾಗಿ ನಿನ್ನ ಮಿತ್ರನಲ್ಲ. ಅದು ಮೀನುಗಳಿರುವ ಕೆರೆಯ ಸುತ್ತ ಹಕ್ಕಿಗಳು ಹಾರಾಡುವಂತೆ. ನಿನ್ನ ಕಷ್ಟ, ಸುಖಗಳೆರಡರಲ್ಲೂ ನಿನ್ನ ಹತ್ತಿರವಿರುವವನೇ ನಿಜವಾದ ಸ್ನೇಹಿತ. ತಾವರೆಯ ಸುತ್ತ ವಾಸವಿರುವ ಜೀವಿಗಳಂತೆ.*

ಧನಿಕನ ನಿಕಟರಾಗಿ ಹಲವರು ಸುತ್ತುತ್ತಿರುತ್ತಾರೆ. ಅವನ ಎಲ್ಲ ಬೇಕುಗಳಿಗೆ ಸ್ಪಂದಿಸುತ್ತಾ ಅವನ ಮಿತ್ರನಂತೆ ಇರುವ ಆ ಮಂದಿಗಳಲ್ಲಿ ಹೆಚ್ಚಿನವರ ಒಳಕಣ್ಣು ಅವನ ಸಂಪತ್ತಿನ ಮೇಲೆ ನೆಟ್ಟಿರುತ್ತದೆ. ಅವನ ನಿಕಟರಾಗಿ ಅವನ ಹಣದ ಲಾಭ ಪಡೆಯುವ ಈ ಮಂದಿ ಅವನ ಬಳಿ ಹಣವು ಕಡಿಮೆಯಾದಂತೆ ದೂರ ಸರಿಯುತ್ತಾರೆ. ಅವನ ಕಷ್ಟಕಾಲಕ್ಕೆ ಯಾರೂ ಹತ್ತಿರ ಸುಳಿಯುವುದಿಲ್ಲ. ಕವಿ ವರ್ಯರು ಇಂತಹವರಿಗೆ ನೀಡಿದ ಉದಾಹರಣೆ ಕೆರೆಯ ಹತ್ತಿರ ಹಾರಾಡುವ ಪಕ್ಷಿಗಳನ್ನು. ಕೆರೆಯಲ್ಲಿರುವ ಮೀನುಗಳನ್ನು ಹೆಕ್ಕಿ ತಿನ್ನಲು ಸಮಯ ನೋಡುವ ಈ ಪಕ್ಷಿಗಳಿಗೆ ನಿಜವಾಗಿ ಬೇಕಾದುದು ಕೆರೆಯ ನೀರಲ್ಲ; ಬದಲು ಅದರಲ್ಲಿರುವ ಮೀನು ಮಾತ್ರ. ಮೀನಿಲ್ಲವಾದರೆ ಹಕ್ಕಿ ಹತ್ತಿರ ಬರುವುದಿಲ್ಲ. ಕಷ್ಟ ಸುಖಗಳಲ್ಲಿ, ಐಶ್ವರ್ಯ ಬಡತನಗಳೆರಡರಲ್ಲೂ ಜತೆಗಿರುವವನೇ ನಿಜವಾದ ಮಿತ್ರ. ನೀರಿನಲ್ಲಿ ಬೆಳೆಯುವ ತಾವರೆಯ ಸುತ್ತ ಅನೇಕ ಜೀವಿಗಳು ಇರುತ್ತವೆ. ತಾವರೆ ಅರಳಿದರೂ ಮುದುಡಿದರೂ ಅವು ಜತೆಗಿರುತ್ತವೆ. ಕಷ್ಟ ಸುಖಗಳೆರಡರಲ್ಲೂ ಜತೆಯಾಗಿರುವ ಇಂತಹ ಮಿತ್ರರೇ ನಿಜವಾದ ಮಿತ್ರರು ಎನ್ನುತ್ತಾರೆ ಕವಿವರ್ಯರು.

وَوُلْدُ صُلْبِكَ فِتَنٌ اِنْ عَلِمْتَ بِهَا
وَرُبَّمَا قَتْلُ نَفْسٍ مِنْكَ بِالْوَلَدِ
وَالْقَصْبُ وَالْمَوْزُ وَالسَّرْطَانُ قَاتِلُهَا
مِنْهَا حَذَارِ حَذَارِ الْوَلَدِ فِي الْخَلَدِ

*ನಿನ್ನ ಮಕ್ಕಳ ಬಗ್ಗೆ ನೀನು ಚಿಂತಿಸುವುದಾದರೆ, ಅವರು ನಿನಗೆ ಕೇಡೂ ಆಗಿರಬಹುದು. ಕೆಲವೊಮ್ಮೆ ನಿನ್ನ ನಾಶ ಅದರಿಂದಲೇ ಆಗಿರಬಹುದು. ಬಿದಿರು, ಬಾಳೆ, ಏಡಿ ಮುಂತಾದವುಗಳ ನಾಶವು ಅವುಗಳ ಸಂತತಿಗಳಿಂದಲೇ. ಆದ್ದರಿಂದ ಪಾರತ್ರಿಕ ವಿಷಯದಲ್ಲಿ ಮಕ್ಕಳ ಬಗ್ಗೆ ಜಾಗೃತನಾಗಿರು.*

ತಂದೆ ತಾಯಂದಿರಿಗೆ ಕೇಡುಂಟು ಮಾಡುವ ಸಂತಾನಗಳ ಬಗ್ಗೆ ಕವಿವರ್ಯರಿಲ್ಲಿ ಎಚ್ಚರಿಕೆ ನೀಡುತ್ತಿದ್ದಾರೆ. ಮಕ್ಕಳು ಉತ್ತಮರಾದರೆ ತಂದೆ ತಾಯಂದಿರಿಗೆ ಇಹಪರಗಳೆರಡರಲ್ಲೂ ಅವರಿಂದ ಒಳಿತು ದೊರಕುತ್ತದೆ. ಆದರೆ ಅವರು ಕೆಟ್ಟವರಾದರೆ ಸ್ವತ ತಮಗೇ ಅಲ್ಲ; ತಮ್ಮ ತಂದೆ ತಾಯಂದಿರಿಗೂ ಅವರು ಕೇಡಾಗುತ್ತಾರೆ. ತಂದೆ ತಾಯಂದಿರಿಗೆ ಅಪಕೀರ್ತಿ ತಂದು, ಅವರ ಮಾನ ಹರಾಜು ಮಾಡುವ ಕೆಲಸಕ್ಕೆ ಕೆಟ್ಟ ಮಕ್ಕಳು ಇಳಿಯುತ್ತಾರೆ. ತಂದೆ-ತಾಯಂದಿರು ಮಕ್ಕಳನ್ನು ಉತ್ತಮ ರೀತಿಯಲ್ಲಿ, ಸದಾಚಾರ ಮೌಲ್ಯಗಳನ್ನು ಕಲಿಸಿ ಬೆಳೆಸದಿದ್ದರೆ ಅವರು ಕೇಡಾಗಿ ಪರಿಣಮಿಸುವರು. ತಂದೆ ತಾಯಂದಿರ ಮಾತುಗಳಿಗೆ ಕಿವಿಗೊಡದೆ, ನಿಯಂತ್ರಿಸ ಹೊರಟರೆ ಇದಿರೇಟು ನೀಡುವ ಮಕ್ಕಳು, ತಂದೆ ತಾಯಂದಿರ ಮಾನಸಿಕ ಸ್ವಸ್ಥತೆಯನ್ನು ನಾಶಗೊಳಿಸುತ್ತಾರೆ. ಕೆಲವೊಮ್ಮೆ ತಂದೆ ತಾಯಂದಿರನ್ನು ಹಿಂಸಿಸಲು ಮುಂದಾಗುವ ಮಕ್ಕಳು ಅವರ ನಾಶಕ್ಕೂ ಕಾರಣರಾಗುತ್ತಾರೆ. ಕವಿ ವರ್ಯರು ಇದಕ್ಕೆ ಬಿದಿರು, ಬಾಳೆ ಮತ್ತು ಏಡಿಯನ್ನು ಉದಹರಿಸಿದ್ದಾರೆ. ಬಿದಿರು ಬೆಳೆದು ಅದಕ್ಕೆ ಸಸಿ ಮೊಳಕೆಯಾದರೆ ಬಿದಿರನ್ನು ಇತರ ಬಳಕೆಗೆ ಕಡಿದು ತೆಗೆಯುವರು. ಬಾಳೆ ಗಿಡವು ಗೊನೆ ಹಾಕಿದರೆ ಗೊನೆ ತೆಗೆಯುವಾಗ ಬಾಳೆ ಗಿಡವನ್ನು ಕಡಿದು ಹಾಕುವರು. ಹೆರಿಗೆಗಾಗಿ ಸಮುದ್ರ ಬಿಟ್ಟು ತೀರಕ್ಕೆ ಬರುವ ಏಡಿ ಮನುಷ್ಯನ ಕೈಗೆ ಸಿಗುತ್ತದೆ. ಒಟ್ಟಿನಲ್ಲಿ ಸಂತಾನ ಇವುಗಳ ನಾಶಕ್ಕೆ ಹೇತುವೆನ್ನುವುದನ್ನು ಕವಿ ವರ್ಯರು ತೋರಿಸುತ್ತಾರೆ. ■



ಮರ್ಸೀನ್ ಪಬ್ಲಿಕೇಷನ್ಸ್ ಹಾಗೂ ಅಲ್‌ಮದೀನಾ ಪಬ್ಲಿಕೇಷನ್ಸ್ | ಪ್ರಕಟಿಸಿರುವ
ಸಂಪೂರ್ಣ ಖುರ್‌ಆನ್ ಕನ್ನಡ ವ್ಯಾಖ್ಯಾನ
ಬೆಲೆ ರೂ. 800.00 | ಗಲ್ಫ್ ರಾಷ್ಟ್ರಗಳಿಗೆ ಬೆಲೆ ರೂ. 2500.00
ಸಂಪರ್ಕಿಸಿರಿ ಅಥವಾ M.O.ಕಳುಹಿಸಿರಿ
ಸಮರಾತ್ ಬುಕ್ಸ್, ಅಲ್‌ಅನ್ಸಾರ್ ಕಾರ್ಯಾಲಯ, ಕುತ್ತಾರ್, ಮಂಗಳೂರು-17. Ph: 0824-2467886, Cell: 9480075704

The Boutique
ದಿ ಬುಟಿಕ್
Prof : Suhim M.Khan
Mob: 9845428845
0824-2421633
ಇಂದೇ ಭೇಟಿ ಕೊಡಿ
@ City Centre Mall, Second Floor, SF-4, K.S.Rao Road, Mangalore-1
● SAREES ● SALWARS ● DRESS MATERIALS ● TOPS
ಸಿಟಿ ಸೆಂಟರ್ ಮಾಲ್, 2ನೇ ಮಹಡಿ, ಎಸ್.ಎಫ್.4, ಕೆ.ಎಸ್.ರಾವ್ ರಸ್ತೆ, ಮಂಗಳೂರು-1
● ಸಾರಿ ● ಸಲ್ವಾರ್ ● ಡ್ರೆಸ್ ಮೆಟೀರಿಯಲ್● ಟಾಪ್ಸ್




# ಚಲಿಸುವ ದಂಡ, ಬೆಳಗುವ ಕೈ

| | |
|---|---|
| ಸೂರ: | ಸೂರಾ ಅನ್ನಮ್ಲ್ |
| ಅವತೀರ್ಣ | ಮಕ್ಕಾ |
| ಒಟ್ಟು ಸೂಕ್ತಗಳು | 93 |

7. ಮೂಸಾ ತಮ್ಮ ಕುಟುಂಬದೊಡನೆ ಹೀಗೆ ಹೇಳಿದ ಸಂದರ್ಭ. ನಾನು ಒಂದು ಬೆಂಕಿಯನ್ನು ಕಂಡಿರುವೆನು. ನಾನು ಅಲ್ಲಿಂದೇನಾದರೂ ಸುದ್ದಿಯನ್ನು ತರುವೆನು. ಅಥವಾ ನೀವು ಚಳಿಕಾಯುವ ಸಲುವಾಗಿ ಬೆಂಕಿಯ ಕೆಂಡವನ್ನಾದರೂ ತರುವೆನು. (1)

8. ಅವರು ಅಲ್ಲಿ ತಲುಪಿದಾಗ "ಬೆಂಕಿಯ ಹತ್ತಿರವಿರುವವರು ಹಾಗೂ ಅದರ ಸುತ್ತಲಿರುವವರು ಅನುಗ್ರಹೀತರು; ಜಗದ್ಪಾಲಕನಾಗಿರುವ ಅಲ್ಲಾಹನು ಪರಮ ಪಾವನನು" ಎಂದು ಕರೆದು ಹೇಳಲಾಯಿತು.

9. ಮೂಸಾ, ನಿಶ್ಚಯ ನಾನು ಯುಕ್ತಿವಂತನೂ ಪ್ರತಾಪಿಯೂ ಆಗಿರುವ ಅಲ್ಲಾಹನು.

10. ನಿಮ್ಮ ದಂಡವನ್ನು ಕೆಳಹಾಕಿರಿ. (ಮೂಸಾ عليه السلام ದಂಡವನ್ನು ಕೆಳಹಾಕಿದರು) ಆಗ ಅದು ಹಾವಿನಂತೆ ಚಲಿಸುವುದನ್ನು ಕಂಡಾಗ ಅವರು ಹಿಂತಿರುಗಿ ಓಡಿದರು. ಮತ್ತು ತಿರುಗಿ ಬರಲಿಲ್ಲ. (ಆಗ ಅಲ್ಲಾಹನು ಹೇಳಿದನು) ಓ ಮೂಸಾ, ತಾವು ಭಯಪಡದಿರಿ, ನಿಶ್ಚಯ ನನ್ನ ಬಳಿ ಸಂದೇಶವಾಹಕರು ಭಯ ಪಡುವುದಿಲ್ಲ.

11. ಆದರೆ ಯಾರಾದರೂ ಅಕ್ರಮವೆಸಗಿ, ನಂತರ ಕೆಡುಕಿನ ಬಳಿಕ ಒಳಿತನ್ನು ಬದಲಿಯಾಗಿ ತಂದರೆ, ಖಂಡಿತ ನಾನು ಪರಮ ಕ್ಷಮಾಶೀಲನೂ, ದಯಾಮಯನೂ ಆಗಿರುವೆನು. (2)

12. ತಮ್ಮ ಕೈಯನ್ನು ನಿಮ್ಮ ಜೇಬಿನೊಳಕ್ಕೆ ಹಾಕಿರಿ. ಅದು ರೋಗ ಕಾರಣವಲ್ಲದೆ ಬೆಳ್ಳಗಾಗಿ ಹೊರ ಬರುವುದು. ಒಂಭತ್ತು ದೃಷ್ಟಾಂತಗಳಲ್ಲಾಗಿ ತಾವು ಫಿರ್‌ಔನ್ ಮತ್ತು ಆತನ ಜನತೆಯೆಡೆಗೆ ಹೋಗಿರಿ. ಅವರು ಪಥಭ್ರಷ್ಟರಾಗಿರುವ ಜನಾಂಗವಾಗಿರುವರು.

13. ನಮ್ಮ ನಿದರ್ಶನಗಳು ಅವರ ಬಳಿಗೆ ಸತ್ಯವನ್ನು ಪ್ರತ್ಯಕ್ಷಗೊಳಿಸುವ ರೀತಿಯಲ್ಲಿ ಬಂದಾಗ ಅವರು ಇದು ಸ್ಪಷ್ಟವಾದ ಜಾಲವಿದ್ಯೆ ಎಂದು ಹೇಳಿದರು.

14. ಅವರ ಮನಸ್ಸುಗಳು ಅವುಗಳು ಸತ್ಯವೆಂದು ಖಚಿತಗೊಳಿಸಿದ್ದರೂ ಅಕ್ರಮ ಮತ್ತು ಅಹಂಕಾರದಿಂದ ಅವುಗಳನ್ನವರು ನಿಷೇಧಿಸಿದರು. ಆಗ ಆ ಕೇಡು ಹರಡಿದವರ ಅಂತ್ಯವು ಹೇಗಾಯಿತೆಂದು ನೋಡಿರಿ.

(1) ಪ್ರವಾದಿ ಮೂಸಾ عليه السلام ರವರ ಚರಿತ್ರೆಯ ಹ್ರಸ್ವ ಪ್ರಸ್ತಾಪವು ಒಟ್ಟು 8 ಸೂಕ್ತಗಳಲ್ಲಿ ಅಡಗಿದೆ. ಈಜಿಪ್ಟಿನಲ್ಲಿ ಫಿರ್‌ಔನನ ಆಶ್ರಯ ದಲ್ಲಿ ಬೆಳೆದಿದ್ದ ಮೂಸಾ ಖಿಬ್ತಿಯನ್ ವಂಶದ ಒಬ್ಬ ವ್ಯಕ್ತಿಯನ್ನು ಕೊಂದ ಆರೋಪ ಹೊತ್ತು ಪ್ರತೀಕಾರ ದಿಂದ ತಪ್ಪಿಸಿಕೊಳ್ಳಲು ಅಲ್ಲಿಂದ ಮದ್‌ಯನ್‌ಗೆ ತಲುಪುತ್ತಾರೆ. ಮದ್‌ಯನ್‌ನಲ್ಲಿ ಪ್ರವಾದಿ ಶುಐಬ್ عليه السلام ರವರ ಪುತ್ರಿ ಸಫೂರಾರೊಂದಿಗೆ ವಿವಾಹವು ನಡೆಯಿತು. ಹತ್ತು ವರ್ಷಗಳ ಕಾಲ ಅಲ್ಲಿ ನೆಲೆಸಿದ್ದ ಮೂಸಾ عليه السلام ತಾಯಿಯನ್ನು ಕಾಣಲೆಂದು ಈಜಿಪ್ಟ್‌ಗೆ ಮರಳುತ್ತಾರೆ. ದಾರಿ ಮಧ್ಯೆ ರಾತ್ರಿಯಾದಾಗ ಪತ್ನಿಗೆ ಹೆರಿಗೆ ನೋವು. ಅವರಿಗೆ ಈ ಮಧ್ಯೆ ಈಜಿಪ್ಟಿನ ದಾರಿಯೂ ತಪ್ಪಿರುತ್ತದೆ. ಜತೆಗಿದ್ದ ದೀಪವೂ ನಂದಿ ಹೋಗಿರುತ್ತದೆ. ಆಗ ಮೂಸಾ عليه السلام ರವರು ದೂರದಲ್ಲಿ ಒಂದು ಬೆಳಕನ್ನು ಕಾಣುತ್ತಾರೆ. ಪತ್ನಿಯೊಂದಿಗೆ ತಾನು ಕಾಣುತ್ತಿರುವ ಬೆಂಕಿಯ ಬಗ್ಗೆ ತಿಳಿಸಿ ಅಲ್ಲಿಂದ ರಾತ್ರಿ ಚಳಿಕಾಯಲು ಕೆಂಡವನ್ನು ಅಥವಾ ನಮಗೆ ಅಗತ್ಯವಿರುವ ಮಾಹಿತಿಯನ್ನು ತರುತ್ತೇನೆ ಎಂದು ಹೇಳಿ ಮೂಸಾ عليه السلام ರವರು ಅತ್ತ ಸಾಗುತ್ತಾರೆ.

(2) ಬೆಂಕಿ ಕಂಡ ದಿಕ್ಕಿಗೆ ಸಾಗಿದ ಮೂಸಾ عليه السلام ರವರು ಹತ್ತಿರ ತಲುಪಿದಾಗ ಅಲ್ಲಿ ಮರವೊಂದು ವಿಶಿಷ್ಟ ಪ್ರಕಾಶದಿಂದ ಬೆಳಗುವುದನ್ನು ಕಂಡರು. ಪವಿತ್ರ ಸೀನಾಲ್ ಪರ್ವತದ ತ್ವುವಾ ತಪ್ಪಲು ಪ್ರದೇಶವಾಗಿತ್ತು ಅದು. ಅಲ್ಲಾಹನು ಮೂಸಾ عليه السلام ರವರನ್ನು ತನ್ನ ಸಂದೇಶವಾಹಕನಾಗಿ ನೇಮಿಸಲು ನಿಯುಕ್ತಗೊಳಿಸಿದ ಸ್ಥಳವಾಗಿತ್ತು ಅದು. ಮೂಸಾ عليه السلام ರವರು ಬೆಂಕಿಯೆಂದು ಭಾವಿಸಿದ ಆ ಪ್ರಕಾಶದ ಸುತ್ತಲೂ ಬರಕತ್ತು ತುಂಬಿದ ಸಮೃದ್ಧ ಪ್ರದೇಶವೆಂದು ಅಲ್ಲಾಹನು ಮೂಸಾ عليه السلام ರಿಗೆ ತಿಳಿಸುತ್ತಾನೆ. 8ನೇ ಸೂಕ್ತದಲ್ಲಿ 'ಮನ್‌ಫಿನ್ನಾರಿ' ಎಂದಿರುವುದರ ಉದ್ದೇಶ 'ಬೆಂಕಿ'ಯ ಹತ್ತಿರವಿರುವವರೆಂದಾಗಿದ್ದು ಮೂಸಾ عليه السلام ರನ್ನು ಉದ್ದೇಶಿಸಲಾಗಿದೆಯೆಂದೂ, ವ ಮನ್ ಹವ್‌ಲಹಾ- ಅದರ ಸುತ್ತಲಿರುವವರು ಎನ್ನುವ ಮೂಲಕ ಮಲಕ್‌ಗಳನ್ನು ಉದ್ದೇಶಿಸಲಾಗಿದೆಯೆಂದೂ ವ್ಯಾಖ್ಯಾನಗಳಿವೆ. ಬೇರೆ ಅಭಿಪ್ರಾಯಗಳೂ ವ್ಯಾಖ್ಯಾನ ಗ್ರಂಥಗಳಲ್ಲಿವೆ. ಸೂರಾ ತ್ವಾಹಾದಲ್ಲಿ ಈ ಪ್ರದೇಶವನ್ನು ಪವಿತ್ರ ಭೂಮಿ ಎನ್ನಲಾಗಿರುವುದು ಈ ಬರಕತ್ತು ಕಾರಣದಿಂದಲೇ.

ಪ್ರಕಾಶವಿರುವ ಸ್ಥಳಕ್ಕೆ ತಲುಪಿದ ಮೂಸಾ عليه السلام ರವರನ್ನು ಅಲ್ಲಾಹನು ಕರೆದು ದಿವ್ಯ ಸಂದೇಶಗಳನ್ನು ನೀಡುತ್ತಾನೆ. ಈ ಅಧ್ಯಾಯದಲ್ಲಿ ಮೂಸಾ عليه السلام ರವರಿಗೆ ಅದ್ಭುತ ದಂಡ, ಹಾಗೂ ಪ್ರಕಾಶಿಸುವ ಹಸ್ತದ ಬಗ್ಗೆ ನೇರ ಪ್ರಸ್ತಾಪವಿದೆ. ಸೂರಾ ತ್ವಾಹಾದಲ್ಲಿ ಸಂಭಾಷಣೆಯ ಇನ್ನೂ ಹೆಚ್ಚಿನ ಭಾಗಗಳಿವೆ. ತೌಹೀದ್, ಇಬಾದತ್ ಪರಲೋಕ ವಿಶ್ವಾಸ ಮುಂತಾದವುಗಳ ಪ್ರಸ್ತಾಪದ ಬಳಿಕ ಹಾವಾಗಿ ಮಾರ್ಪಡುವ ದಂಡ ಹಾಗೂ ಇತರ ನಿದರ್ಶನಗಳ ಬಗ್ಗೆ ತಿಳಿಸಲಾಯಿತು. ಕೈಯಲ್ಲಿನ ಬೆತ್ತವನ್ನು ನೆಲಕ್ಕೆ ಹಾಕಲು ಹೇಳಿದಾಗ ಅದು ಹಾವಾಗಿ ಮಾರ್ಪಟ್ಟಿತು. ಇದನ್ನು ಕಂಡು ಹೆದರಿದ ಮೂಸಾ عليه السلام ರಿಗೆ ಅಲ್ಲಾಹನು ಧೈರ್ಯ ಹೇಳಿದನು. ತನ್ನ ಬಳಿ ಸಂದೇಶವಾಹಕರು ಹೆದರಬೇಕಿಲ್ಲವೆಂದೂ, ಅಕ್ರಮವೆಸಗಿದವರು ಕೂಡಾ ಬಳಿಕ ಒಳಿತನ್ನು ಮಾಡಿದರೆ ಅವರಿಗೆ ತಾನು ಕ್ಷಮಿಸುವೆನೆಂದೂ ಅಲ್ಲಾಹನು ತಿಳಿಸಿದನು.

(3) ತಮ್ಮ ಕಂಕುಳದ ಭಾಗದಲ್ಲಿರುವ ಜೇಬಿಗೆ ಕೈ ಹಾಕುವಾಗ ಕೈ ಪ್ರಕಾಶಮಾನವಾಗಿ ಹೊಳೆಯುವುದನ್ನು ಅಲ್ಲಾಹನು ಮೂಸಾ عليه السلام ರಿಗೆ ಪವಾಡವಾಗಿ ನೀಡಿದನು. ಇದೂ ಸೇರಿ ಒಟ್ಟು ಒಂಭತ್ತು ನಿದರ್ಶನಗಳನ್ನು ನೀಡಿದ ಅಲ್ಲಾಹನು ಫಿರ್‌ಔನ್ ಹಾಗೂ ಅವನ ಜನತೆಯೆಡೆಗೆ ಸಂದೇಶವಾಹಕರಾಗಿ ಸಾಗುವಂತೆ ನಿರ್ದೇಶನವನ್ನು ನೀಡುತ್ತಾನೆ. ಇಲ್ಲಿ ಮೂಸಾ عليه السلام ರಿಗೆ ಈ ನಿರ್ದೇಶನ ನೀಡಿದ ಬಗ್ಗೆ ಮಾತ್ರ ಪ್ರಸ್ತಾಪವಿದೆ. 14ನೇ ಸೂಕ್ತವು ಫಿರ್‌ಔನ್ ಮತ್ತು ಜನತೆ ಪ್ರವಾದಿ ಮೂಸಾ عليه السلام ರವರ ಸಂದೇಶವನ್ನು ತಿರಸ್ಕರಿಸಿದ ಪ್ರಸ್ತಾಪವಿದೆ. ಪ್ರವಾದಿ ಮೂಸಾ عليه السلام ರವರ ಸಂದೇಶ ಹಾಗೂ ಅವರು ತೋರಿಸಿದ ನಿದರ್ಶನಗಳಿಂದ ಮೂಸಾ عليه السلام ರವರು ಅಲ್ಲಾಹನ ಪ್ರವಾದಿ ಹೌದೆಂದೂ ಅವರು ಹೇಳುವುದು ಸತ್ಯವೆಂದೂ ಮನವರಿಕೆಯಾಗಿದ್ದರೂ ಅಕ್ರಮ ಮತ್ತು ಅಹಂಕಾರ ಕಾರಣ ದಿಂದ ಅವರು ಸತ್ಯವನ್ನು ನಿಷೇಧಿಸಿದರು. ಅಂತಿಮ ಪರಿಣಾಮ ಅವರಿಗೆ ಸರ್ವ ನಾಶವನ್ನು ತಂದೊಡ್ಡಿತು. ಅವರ ಅಂತ್ಯವೇನಾಯಿತು ನೋಡಿ ಎನ್ನುತ್ತಾ ಮೂಸಾ عليه السلام ರ ಚರಿತ್ರೆಯು ಕೊನೆಗೊಳ್ಳುತ್ತದೆ. ■

ಅನ್ಸಾರಿಯ್ಯ ಹಜ್ ಉಮ್ರಾ ಟೂರ್ಸ್ & ಟ್ರಾವೆಲ್ಸ್
ನಮ್ಮ ವಿಶೇಷತೆಗಳು
• ಮಂಗಳೂರಿನಿಂದ-ಮಂಗಳೂರಿಗೆ • ಹರಮಿನ ಸಮೀಪ ರೂಮಿನ ವ್ಯವಸ್ಥೆ • ಊರಿನ ಮಾದರಿ ಊಟೋಪಚಾರ • ಆರಾಧನೆಗಳಿಗೆ ಬೇಕಾದ ಅನುಭವಸ್ಥ ಉಸ್ತಾದರಿಂದ ಸಂದರ್ಭೋಚಿತ ಮಾಹಿತಿ.
ನಮ್ಮ ಸೇವೆಗಳು:
ಟಿಕೆಟಿಂಗ್, ವೀಸಾ ಕ್ಲಿಯೆರೆನ್ಸ್, ಎಮಿಗ್ರೇಷನ್, ಪಾಸ್‌ಪೋರ್ಟ್ ಸರ್ವಿಸ್
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿರಿ
ಅಲ್‌ಹಾಜ್ ಮುಹಮ್ಮದ್ ಶರೀಫ್ ಮದನಿ ಉಳ್ಳಾಲ : 9880274410
ಸಯ್ಯಿದ್ ಶಾಹುಲ್ ಹಮೀದ್ ತಂಙಳ್ Cell: 09995000595
ಕಛೇರಿ ನಂ: 0824-4265589
2ನೇ ಮಹಡಿ, ರೀಗಲ್ ಪಾರ್ಕ್, ನೌಫಲ್ ಹೋಟೆಲ್ ಎದುರುಗಡೆ, ಮಿಷನ್ ಸ್ಟ್ರೀಟ್, ಬಂದರ್, ಮಂಗಳೂರು-1



We Supply Soft Drinks for Marriage, Party & Other Occassions
Cell : 9880811537, 9916315496, Ph : 08254-230688 (R)
HUNGLURE, KUNDAPUR - 576 217.

# ಹಸಿವು ಮುಗಿಸುವ ಫಿತ್ವ್‌ರ್ ಝಕಾತ್

ಎಸ್.ಪಿ.ಹಂಝ ಸಖಾಫಿ, ಬಂಟ್ವಾಳ

## ಮಹತ್ವ

- ಫಿತ್ವ್‌ರ್ ಝಕಾತ್ ಹಿಜರಿ ಎರಡನೇ ವರ್ಷ ಜಾರಿಗೆ ಬಂತು.
- ಫಿತ್ವ್‌ರ್ ಅಂದರೆ ಉಪವಾಸ ಮುಕ್ತಾಯ ಗೊಳಿಸುವುದೆಂ ದರ್ಥ. ಉಪವಾಸದ ತಿಂಗಳು ರಮಳಾನ್ ಮುಕ್ತಾಯವಾಗುವು ದರೊಂದಿಗೆ ಕಡ್ಡಾಯವಾಗುವ ದಾನಕ್ಕೆ ಝಕಾತುಲ್ ಫಿತ್ವ್‌ರ್ ಎಂದು ಹೆಸರು.
- ನಮಾಜಿನ ಕೊರತೆಗಳಿಗೆ ಸಹ್‌ವಿನ ಸುಜೂದ್ ಪರಿಹಾರವಾಗುವಂತೆ ಉಪವಾಸದ ಕೊರತೆಗ ಳಿಗೆ ಫಿತ್ವ್‌ರ್ ಝಕಾತ್ ಪರಿಹಾರವಾಗುವುದು.
- ರಮಳಾನ್ ಭೂಮಿ ಆಕಾಶದ ನಡುವೆಯಿ ರುತ್ತದೆ. ಫಿತ್ವ್‌ರ್ ಝಕಾತ್ ಮೂಲಕ ಅದು ಮೇಲೇರುತ್ತದೆ. (ಸ್ವೀಕರಿಸಲ್ಪಡು ತ್ತದೆ) - ಹದೀಸ್




## ಝಕಾತ್ ಕೊಡಬೇಕಾದವನು

ಕುಟುಂಬದ ಯಜಮಾನ

### ಕೊಡಬೇಕಾದ್ದು

ಸ್ವಂತದ್ದು, ಪತ್ನಿಯದ್ದು, ಸಂಪಾ ದನೆ ಸಾಧ್ಯ ವಾಗದ ಮಕ್ಕಳದ್ದು, ಖರ್ಚು ಕೊಡಲು ತನಗೆ ಕಡ್ಡಾಯವಿರುವ ತಂದೆ ತಾಯಂದಿರದ್ದು, ತನ್ನ ಕೆಳಗೆ ವೇತನ ನಿಗದಿಪಡಿಸದ ಪರಿಚಾರಕರದ್ದು.

## ಕಡ್ಡಾಯವಾಗುವ ಸಮಯ

- ಶವ್ವಾಲ್ ತಿಂಗಳ ಪ್ರಾರಂಭದೊಂದಿಗೆ.
- ರಮಳಾನ್ ತಿಂಗಳ ಕೊನೆ ಘಳಿಗೆಯಲ್ಲಿ ಮೃತ ರಾದವರ ಫಿತ್‌ರ್ ಝಕಾತ್ ನೀಡಬೇಕಿಲ್ಲ.
- ರಮಳಾನ್ ಮುಗಿದು ಶವ್ವಾಲ್ ಪ್ರಾರಂಭ ವಾದ ನಂತರ ಜನಿಸಿದ ಮಗುವಿಗಾಗಿ ಝಕಾತ್ ಕೊಡಬೇಕಿಲ್ಲ.
- ರಮಳಾನ್ ಕೊನೆ ಘಳಿಗೆಯಲ್ಲಿ ಜನಿಸಿ ಶವ್ವಾಲ್ ಪ್ರಾರಂಭ ಗೊಂಡ ಕೂಡಲೇ ಮೃತ ಹೊಂದಿದ ಮಗುವಿಗಾಗಿ ಝಕಾತ್ ಕೊಡುವುದು ಕಡ್ಡಾಯ.

## ಅರ್ಹತೆ

ಈದ್‌ನ ಹಗಲು ಮತ್ತು ರಾತ್ರಿಗೆ ತನ್ನ ಮತ್ತು ಆಶ್ರಿತರ ಆಹಾರ, ವಸ್ತ್ರ, ವಸತಿಯ ಖರ್ಚಿಗೆ ಬೇಕಾ ದದ್ದು ಕಳೆದು ಉಳಿದರೆ ಫಿತ್ರ್ ಝಕಾತ್ ದಾನ ಕಡ್ಡಾಯ.

## ಕೊಡಬೇಕಾದ ಸಮಯ

- ಈದ್ ನಮಾಜ್‌ಗೆ ಇಮಾಮ್ ತಕ್‌ಬೀರತುಲ್ ಇಹ್ರಾಮ್ ಹೇಳುವ ಮುನ್ನ ನೀಡುವುದು ಸುನ್ನತ್.
- ಈದ್‌ನ ದಿನವೇ ನೀಡುವುದಾದರೂ ಈದ್ ನಮಾಜ್‌ನ ನಂತರಕ್ಕೆ ಮುಂದೂಡುವುದು ಕರಾಹತ್.
- ಈದ್‌ನ ಸೂರ್ಯಾಸ್ತದ ನಂತರ ನೀಡಲು ಮುಂದೂಡುವುದು ಹರಾಂ.
- ಈದ್ ದಿನ್ಕಿಂತ ಮುಂದೂಡಿದ್ದಲ್ಲಿ ತಕ್ಷಣ ನೀಡುವುದು ಕಡ್ಡಾಯ.

## ಕೊಡಬೇಕಾದದ್ದೇನು?

- ಫಿತ್‌ರ್ ಝಕಾತ್ ಯಾರಿಗೆ ಕಡ್ಡಾಯವಾಗಿದೆಯೋ ಅವನ ಊರಿನಲ್ಲಿ ಸಾಮಾನ್ಯವಾಗಿ ಬಳಸುವ ಮುಖ್ಯ ಆಹಾರ ಧಾನ್ಯ.
- ಶಾಫಿಈ ಮದ್‌ಹಬ್‌ನಂತೆ ಫಿತ್‌ರ್ ಝಕಾತ್‌ನ ಮೌಲ್ಯದಷ್ಟು ಹಣವನ್ನು ಝಕಾತ್ ಆಗಿ ನೀಡುವುದು ಸಿಂಧುವಲ್ಲ.
- ಅಕ್ಕಿ ಮುಖ್ಯ ಆಹಾರ ವಸ್ತುವಾಗಿರುವ ಪ್ರದೇಶದಲ್ಲಿ ಅಕ್ಕಿಗಿಂತ ಉತ್ತಮ ಆಹಾರವೆನಿಸಿದ ಗೋಧಿಯನ್ನು ನೀಡಬಹುದಾಗಿದೆ.
- ಕುಚ್ಚಿಲಕ್ಕಿ, ಬಿಳಿಅಕ್ಕಿ, ತುಪ್ಪದೂಟದ ಅಕ್ಕಿ ಸೇರಿದಂತೆ ಯಾವುದೇ ತರಹ ಅಕ್ಕಿಯನ್ನು ಕೊಡಬಹುದು.

## ಕೊಡಬೇಕಾದ ಪ್ರಮಾಣ

- ಒಬ್ಬರಿಗೆ ಒಂದು ಸಾಅ್‌ನಂತೆ (ಒಂದು ಸಾಅ್= 3.200 ಲೀಟರ್)
- 3.200 ಲೀಟರ್ ಅಳತೆಯ ಅಕ್ಕಿ ಯ ತೂಕ ಪ್ರಮಾಣ ಸುಮಾರು 2,600ಗ್ರಾಂ

## ಝಕಾತ್‌ಗೆ ನಿಯ್ಯತ್

ಫಿತ್‌ರ್ ಝಕಾತ್ ನೀಡುವಾಗ ತಾನು ಫಿತ್‌ರ್ ಝಕಾತ್ ನೀಡುತ್ತೇನೆಂದು ಸಂಕಲ್ಪಿಸುವುದು ಕಡ್ಡಾಯವಾಗಿದೆ.

## ಕೊಡಬೇಕಾದದ್ದೆಲ್ಲಿ?

- ಝಕಾತ್ ಕಡ್ಡಾಯವಾಗುವ ವ್ಯಕ್ತಿ ಶವ್ವಾಲ್ ಮಾಸಾರಂಭದಲ್ಲಿ ಯಾವ ಪ್ರದೇಶದಲ್ಲಿ ವಾಸ್ತವ್ಯವಿರುವನೋ ಅದೇ ಪ್ರದೇಶ ದಲ್ಲಿ ಝಕಾತ್ ಕೊಡತಕ್ಕದ್ದು.
- ವಿದೇಶಗಳಲ್ಲಿರುವವರು ವಿದೇಶದಲ್ಲೇ ಫಿತ್‌ರ್ ಝಕಾತ್ ಕೊಡಬೇಕು.
- ಫಿತ್‌ರ್ ಝಕಾತ್ ಕಡ್ಡಾಯವಾಗುವ ವೇಳೆ ತನ್ನ ವಾಸಸ್ಥಳ ವಲ್ಲದ ಇತರ ಸಂಬಂಧಿಕರವ ಮಿತ್ರರ ಮನೆಯಲ್ಲಿದ್ದರೆ ಅಲ್ಲೇ ನೀಡಬೇಕು.
- ಶವ್ವಾಲ್ ಆರಂಭದ ವೇಳೆ ಪತ್ನಿಯು ಪತಿಯ ಮನೆಯಲ್ಲಿರದೆ ಇನ್ನೊಂದು ಊರಿನಲ್ಲಿರುವ ತನ್ನ ತಾಯಿಯ ಮನೆಯಲ್ಲಿದ್ದರೆ ಅವಳ ಫಿತ್‌ರ್ ಝಕಾತ್ ಅವಳಿ ರುವ ಊರಿನಲ್ಲಿ ನೀಡಬೇಕು.
- ಝಕಾತನ್ನು ಒಂದು ಊರಿನಿಂದ ಇನ್ನೊಂದು ಊರಿಗೆ ವರ್ಗಾಯಿಸುವಂತಿಲ್ಲ.

## ವಿದೇಶದಲ್ಲಿರುವವರ ಝಕಾತ್

- ಸ್ವಂತದ್ದು ತಾವಿರುವ ಊರಿನಲ್ಲಿ.
- ಪತ್ನಿ ಮಕ್ಕಳದ್ದು ಅವರಿರುವ ಊರಿನಲ್ಲಿ.
- ಪತ್ನಿ, ಮಕ್ಕಳ ಫಿತ್ರ್ ಝಕಾತ್ ಕೊಡಲು ವಿದೇಶದಲ್ಲಿರುವ ಪತಿಯ ಅನುಮತಿ ಅಗತ್ಯ.
- ಪತ್ನಿ ಮಕ್ಕಳು ಇರುವ ಊರಿ ನಲ್ಲಿ ಅವರ ಫಿತ್ರ್ ಝಕಾತ್ ಕೊಡಲು ಇತರ ರನ್ನು ಪತ್ರ, ಫ್ಯಾಕ್ಸ್, ಟೆಲಿ ಫೋನ್ ಮೂಲಕ ವಕಾಲತ್ ಮಾಡಬಹುದು.
- ಪತಿಯ ಆದೇಶವಿಲ್ಲದೆ ಪತ್ನಿ ತನ್ನ ಫಿತ್ರ್ ಝಕಾತ್ ನೀಡಿದರೆ ಸಿಂಧು. ಹಾಗೆ ಕೊಡುವುದು ಸುನ್ನತ್. ಕಡ್ಡಾಯ ವಿಲ್ಲ.




- ವಿದೇಶದಲ್ಲಿರುವ ತಂದೆಯ ಆದೇಶವಿಲ್ಲದೆ ಮಕ್ಕಳ ಝಕಾತ್ ನೀಡುವುದು ಸಿಂಧುವಲ್ಲ. ಆದೇಶ ನೀಡಿ ಮಕ್ಕಳ ಝಕಾತ್ ಕೊಡುವ ವ್ಯವಸ್ಥೆ ಮಾಡದಿದ್ದಲ್ಲಿ ತಂದೆ ತಪ್ಪಿತಸ್ಥ. ನಂತರ ಖಳಾ ಸಂದಾಯ ಕಡ್ಡಾಯ.

## ಝಕಾತ್ ಸಂಬಂಧಿತ ಇತರ ವಿಷಯಗಳು

- ಈದ್‌ಗೆ ಮುಂಚಿತವಾಗಿ ರಮಳಾನಿನಲ್ಲೇ ಫಿತ್‌ರ್ ಝಕಾತ್ ನೀಡಿದರೆ ಸಿಂಧುವಾಗುವುದು. ಆದರೆ ಶವ್ವಾಲ್ ಆರಂಭದ ವೇಳೆ ಪ್ರಸ್ತುತ ಫಿತ್‌ರ್ ಝಕಾತ್ ಕೊಟ್ಟವನು ಝಕಾತ್ ಕೊಡಲು ಅರ್ಹನಾಗಿಯೂ, ಪಡೆದವನು ಪಡೆಯಲು ಅರ್ಹನಾಗಿಯೂ ಇರುವುದು ನಿಬಂಧನೆಯಾಗಿದೆ.
- ಫಿತ್‌ರ್ ಝಕಾತ್ ಕಡ್ಡಾಯವಾಗಲು ದೊಡ್ಡ ಶ್ರೀಮಂತನಾ ಗಬೇಕಿಲ್ಲ. ಝಕಾತ್ ಕೊಡಲು ಕಡ್ಡಾಯವಾದವನು ಕೆಲವೊಮ್ಮೆ ಪಡೆಯಲೂ ಅರ್ಹನಾಗಿರಬಹುದು.
- ಪತ್ನಿ ಮಕ್ಕಳ ಫಿತ್ರ್ ಝಕಾತ್ ಪತಿಯಾದವನು ಕೊಡದಿದ್ದಲ್ಲಿ ಪತಿ ತಪ್ಪಿತಸ್ಥ. ಪತ್ನಿ ಮಕ್ಕಳಿಗೆ ಅದರ ಹೊಣೆಯಿಲ್ಲ.
- ಪತಿ ಫಿತ್ರ್ ಝಕಾತ್ ನೀಡಲು ಅರ್ಹತೆ ಇಲ್ಲದ ಬಡವನಾಗಿದ್ದು ಪತ್ನಿಯ ಬಳಿ ಸೊತ್ತು ಇದ್ದರೆ ಪತ್ನಿ ತನ್ನ ಸ್ವಂತದ್ದು ಕೊಡುವುದು ಸುನ್ನತ್. ಪತಿಯ ಫಿತ್ರ್ ಝಕಾತ್ ಕೊಡಲು ಅವಳಿಗೆ ಕಡ್ಡಾಯವಿಲ್ಲ. ಸುನ್ನತ್ತೂ ಇಲ್ಲ.
- ಪತ್ನಿ ತನ್ನನ್ನು ಅನುಸರಿಸದ ಕಾರಣ ಪತಿ ಅವಳಿಗೆ ಖರ್ಚು ಕೊಡದಿದ್ದರೆ ತನ್ನ ಸ್ವಂತ ಫಿತ್ರ್ ಝಕಾತ್ ಕೊಡುವುದು ಪತ್ನಿಗೆ ಕಡ್ಡಾಯ.
- ಫಿತ್ರ್ ಝಕಾತ್‌ನ ಹಕ್ಕುದಾರರು ಮನೆಗೆ ಬಂದರೆ ಮಾತ್ರ ಕೊಡಬೇಕೆಂಬ ಭಾವನೆ ಸರಿಯಲ್ಲ. ಹಕ್ಕುದಾರರನ್ನು ಹುಡುಕಿ ಸಂದಾಯಿಸುವುದು ಕೊಡುವವನ ಕರ್ತವ್ಯ.
- ಕಾರಣವಿದ್ದು ಯಾ ಕಾರಣವಿಲ್ಲದೆ ಉಪವಾಸ ಹಿಡಿಯದವರೂ ಫಿತ್ರ್ ಝಕಾತ್ ಕೊಡುವುದು ಕಡ್ಡಾಯ.
- ಧಾರ್ಮಿಕ ಶಿಕ್ಷಣವನ್ನು ಕಲಿಯುವ ಕಾರಣದಿಂದ ಉದ್ಯೋಗ ನಿರ್ವಹಣೆ ಅಸಾಧ್ಯವೆನಿಸಿದ ಮಕ್ಕಳ ಖರ್ಚು ವೆಚ್ಚ ನೋಡಿಕೊಳ್ಳುವುದು ತಂದೆಗೆ ಕಡ್ಡಾಯವಾಗಿದೆ. ಆದ್ದರಿಂದ ಅವರ ಫಿತ್‌ರ್ ಝಕಾತ್ ತಂದೆ ನೀಡುವುದು ತಂದೆಯ ಬಾಧ್ಯತೆಯಾಗಿದೆ. ■




ನಮಾಝ್ ವೇಳಾಪಟ್ಟಿ
ಒಂದು ಪುಟದಲ್ಲಿ ಒಂದು ತಿಂಗಳು 12 ಪುಟಗಳು
ಕೇವಲ 15-00 ರೂ. ಮಾತ್ರ
ಅಂಚೆಯಲ್ಲಿ ಬೇಕಾದವರು ರೂ.20 ಕಳುಹಿಸಿಕೊಡಬೇಕು.

ಸಮರಾತ್ ಬುಕ್ಸ್, ಅಲ್‌ಅನ್ಸಾರ್ ಕಾರ್ಯಾಲಯ, ಕುತ್ತಾರ್, ಮಂಗಳೂರು-17. Ph: 0824-2467886, Cell: 9480075704

# ಝಕಾತ್ ವಿತರಣೆ ಹೇಗೆ?

## ಝಕಾತ್ ಅರ್ಹನಿಗೆ ನೇರ ಪಾವತಿ

- ಝಕಾತ್ ಯಾರಿಗೆ ಕಡ್ಡಾಯವೋ ಆ ವ್ಯಕ್ತಿ ಝಕಾತ್ ಪಡೆಯಲು ಅರ್ಹನಾದ ವ್ಯಕ್ತಿಗೆ ನೇರವಾಗಿ ತನ್ನ ಝಕಾತನ್ನು ತಲುಪಿಸುವುದು ಝಕಾತ್ ವಿತರಣೆಯ ಅತ್ಯುತ್ತಮ ದಾರಿಯಾಗಿದೆ. ಏಕೆಂದರೆ?...
- ಝಕಾತ್ ಅರ್ಹವ್ಯಕ್ತಿಗೆ ತಲುಪಿದೆಯೆಂಬ ಖಾತರಿ ಇದರಿಂದುಂಟಾಗುತ್ತದೆ.
- ತನ್ನ ಕರ್ತವ್ಯ ತಾನೇ ನಿರ್ವಹಿಸಿದ ನೆಮ್ಮದಿ ಯುಂಟಾಗುತ್ತದೆ.
- ತನ್ನ ಝಕಾತ್ ಅನರ್ಹರ ಪಾಲಾಗಿ ಆ ಮೂಲಕ ತಾನು ತನ್ನ ಹಕ್ಕು ಪೂರೈಸದವನಾಗಿ ಉಳಿಯುವುದು ತಪ್ಪುತ್ತದೆ.
- ಝಕಾತ್ ನೀಡುವಾತನ ಹಾಗೂ ಪಡೆಯುವಾತನ ನಡುವೆ ಮಾನಸಿಕ ಸಂಬಂಧವನ್ನು ಇದು ಸೃಷ್ಟಿಸುತ್ತದೆ.

## ಇಸ್ಲಾಮೀ ಸರಕಾರಕ್ಕೆ ಝಕಾತ್ ಪಾವತಿ

- ಇಸ್ಲಾಮೀ ಆಡಳಿತ ವ್ಯವಸ್ಥೆಯ ಸರಕಾರವಿರುವ ರಾಷ್ಟ್ರಗಳಲ್ಲಿ ಸರಕಾರಕ್ಕೆ ಝಕಾತ್ ಸಂದಾಯ ಮಾಡಿದರೆ ಝಕಾತ್ ಸಂದಾಯವಾಗುತ್ತದೆ.
- ಇಸ್ಲಾಮೀ ಸರಕಾರವು ರಾಷ್ಟ್ರದ ಬಡವರ, ನಿರ್ಗತಿಕರ, ಇತರ ಝಕಾತ್‌ಗೆ ಅರ್ಹದಾದವರ ಬದುಕಿನ ವ್ಯವಸ್ಥೆಯನ್ನು ನೋಡಿಕೊಳ್ಳುತ್ತದೆ. ಆದ್ದರಿಂದ ಅದರ ಹೊಣೆ ಹೊತ್ತ ಸರಕಾರಕ್ಕೆ ಅಂದರೆ ಖಲೀಫ ಅಥವಾ ಅವರ ಪ್ರತಿನಿಧಿಗಳ ಬಳಿ ಅದನ್ನು ತಲುಪಿಸಿದರೆ ಸಾಕಾಗುತ್ತದೆ.
- ಝಕಾತ್ ಪ್ರತ್ಯಕ್ಷ ಮತ್ತು ಪರೋಕ್ಷಗಳೆಂಬ ಎರಡು ವಿಧವಿದೆ. ಪ್ರತ್ಯಕ್ಷ ಝಕಾತನ್ನು ಪಡೆಯುವ ಹಕ್ಕು ಮಾತ್ರ ಇಸ್ಲಾಮೀ ಸರಕಾರದ ಖಲೀಫರಿಗಿದೆ. ಫಿತ್ರ್ ಝಕಾತ್ ಪರೋಕ್ಷ ಝಕಾತ್ ಆಗಿದ್ದು ಇದನ್ನು ಮಾಲಕನು ನೇರ ಅರ್ಹರಿಗೆ ತಲುಪಿಸುವುದಾಗಿದೆ ಶ್ರೇಷ್ಟ ಕ್ರಮ.
- ಇಸ್ಲಾಮೀ ಸರಕಾರದ ಖಲೀಫ ಹೊಂದಿರುವ ಈ ಝಕಾತ್ ಪಡೆಯುವ ಹಕ್ಕನ್ನು ಇಸ್ಲಾಮೀ ಆಡಳಿತವಿಲ್ಲದೆಡೆ ಯಾರೂ ಹೊಂದಿರುವುದಿಲ್ಲ.

## ಝಕಾತ್ ವಿತರಣೆಗೆ ವ್ಯಕ್ತಿಗಳನ್ನು ನೇಮಕ ಮಾಡುವುದು

- ಝಕಾತ್ ಕಡ್ಡಾಯವಿರುವವನು ತನ್ನ ಝಕಾತನ್ನು ಅರ್ಹರಿಗೆ ಕೊಡಲು ಬೇರೆ ವ್ಯಕ್ತಿಯನ್ನು ವೇತನ ಕೊಟ್ಟು ಯಾ ವೇತನ ಕೊಡದೆ ನೇಮಕ ಮಾಡಬಹುದಾಗಿದೆ.
- ಇದಕ್ಕಾಗಿ ಮಾಲಕನು ಎರಡು ಕ್ರಮಗಳನ್ನು ಸ್ವೀಕರಿಸಬಹುದು. 1.ಯಾರಿಗೆ ಎಷ್ಟು ಝಕಾತ್ ಕೊಡಬೇಕೆಂದು ವ್ಯಕ್ತಿಗಳನ್ನೂ ಸಂಖ್ಯೆಯನ್ನೂ ನಿಗದಿಪಡಿಸಿ ಕೊಡುವುದು. 2.ಯಾರಿಗೆ ಎನ್ನುವುದನ್ನು ಖಚಿತಪಡಿಸದೆ ಅರ್ಹರಿಗೆ ಕೊಡಲು ವಹಿಸಿಕೊಡುವುದು.
- ಈ ಕೆಲಸ ವಹಿಸಿಕೊಂಡವನು ತನ್ನ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಿದರೆ ಮಾಲಕನ ಝಕಾತ್ ಸಂದಾಯವಾಗುತ್ತದೆ. ಅರ್ಹರಿಗೆ ತಲುಪದಿದ್ದರೆ, ಮಾಲಕನೇ ಹೊಣೆಗಾರನಾಗುತ್ತಾನೆ. ಆತನ ಝಕಾತ್ ಸಂದಾಯವಾಗದು. ಅಂದರೆ ಕೇವಲ ನೇಮಕ ಮಾಡುವುದರೊಂದಿಗೆ ಮಾತ್ರ ಹೊಣೆ ಮುಗಿಯುವುದಿಲ್ಲವೆಂದರ್ಥ.
- ವಹಿಸಿಕೊಂಡ ವ್ಯಕ್ತಿಯು
  - ➔ ಅರ್ಹರಿಗೆ ಕೊಟ್ಟಿದ್ದರೆ
  - ➔ ಮಾಲಕನು ಝಕಾತ್ ಕೊಡಬೇಕಾದ ವ್ಯಾಪ್ತಿಯ ಪ್ರದೇಶದಲ್ಲಿ ಕೊಟ್ಟಿದ್ದರೆ
  - ➔ ಅರ್ಹರಿಗೆ ತಲುಪುವ ತನಕ ಝಕಾತ್‌ನ ಮೊತ್ತ ಅದೇ ರೀತಿ ಉಳಿದಿದ್ದರೆ ಝಕಾತ್ ಸಂದಾಯವಾಗುತ್ತದೆ.

  ಈ ಮೂರು ಶರತ್ತುಗಳಲ್ಲಿ ಒಂದು ಇಲ್ಲವಾದರೆ ಝಕಾತ್ ಸಂದಾಯವಲ್ಲ.
- ವಹಿಸಿಕೊಂಡ ವ್ಯಕ್ತಿಯು ಝಕಾತ್‌ನ ಮಾಲಕನ ಊರಿನ ವ್ಯಾಪ್ತಿಯ ಹೊರೆಗೆ ಕೊಟ್ಟಲ್ಲಿ, ಫಿತ್‌ರ್ ಝಕಾತಾಗಿ ನೀಡಿದ ಅಕ್ಕಿಯನ್ನು ಬದಲಿಸುವುದು, ಇತರರ ಅಕ್ಕಿಗಳೊಂದಿಗೆ ಬೆರೆಸುವುದು ಮುಂತಾಗಿ ಮಾಡಿದ್ದಲ್ಲಿ ಝಕಾತ್ ಸಂದಾಯವಾಗುವುದಿಲ್ಲ.
- ವಹಿಸಿಕೊಂಡ ವ್ಯಕ್ತಿಯು ಝಕಾತನ್ನು ನೀಡುವ ತನಕ ವಹಿಸಿಕೊಟ್ಟ ಮಾಲಕ ಹಕ್ಕಿನಿಂದ ಮುಕ್ತವಾಗುವುದಿಲ್ಲ. ವಹಿಸಿಕೊಂಡವನಿಗೆ ಮುಂದಿನ ವರ್ಷಕ್ಕೆ ಮುಂದೂಡುವ ಅವಕಾಶ ವಿರುವುದಿಲ್ಲ.
- ಝಕಾತನ್ನು ಅರ್ಹರಿಗೆ ನೀಡಲು ಯಾವುದೇ ಸಮಿತಿಗೆ ವಹಿಸಿಕೊಡುವುದು ಸಿಂಧುವಲ್ಲ. ವ್ಯಕ್ತಿ ಹೊಂದಿರುವ ಸ್ವಾಯತ್ತೆ ಸಮಿತಿಗಿರುವುದಿಲ್ಲ. ಸಮಿತಿಯ ಪದಾಧಿಕಾರಿಗಳನ್ನು ಬದಲಿಸುವ ಹಕ್ಕು ಸಮಿತಿಯ ಸದಸ್ಯರಿಗಿರುತ್ತದೆ. ಅವರು ಸಮಿತಿಯ ಪ್ರತಿನಿಧಿಗಳೇ ಹೊರತು ವ್ಯಕ್ತಿಯ ಪೂರ್ಣಾಧಿಕಾರ ಹೊಂದಿದ ವಕೀಲನಾಗುವುದಿಲ್ಲ.

## ಮಾಲಕರು ಒಟ್ಟು ಸೇರಿ ಝಕಾತ್ ನೀಡುವುದು

- ಮಾಲಕರು ತಮ್ಮ ಝಕಾತ್ ಸೊತ್ತನ್ನು ಒಟ್ಟು ಸೇರಿಸಿ ಝಕಾತ್ ನೀಡುವುದು ಸಿಂಧುವಾಗುತ್ತದೆ.
- ಒಂದು ಮೊಹಲ್ಲಾದೊಳಗಿರುವ ಧನಿಕರು ತಾವಾಗಿ ತಮ್ಮ ಝಕಾತ್‌ನ ಹಣವನ್ನು ಒಟ್ಟು ಸೇರಿಸಿ ಅರ್ಹರನ್ನು ನಿಗದಿಪಡಿಸಿ ಅವರಿಗೆ ಝಕಾತ್ ಸಂದಾಯವಾಡಬಹುದಾಗಿದೆ.
- ಈ ಕ್ರಮದಂತೆ ಮಾಲಕರು ಸಂಘಟಿತರಾಗುತ್ತಾರೆ. ಸಂಘಟನೆಗೆ ಮಾಲಕರು ತಮ್ಮ ಝಕಾತನ್ನು ನೀಡುವುದಲ್ಲ.
- ಹತ್ತು ಸಾವಿರದಂತೆ ಝಕಾತ್ ನೀಡುವ ಹತ್ತು ಮಂದಿ ಒಟ್ಟು ಸೇರಿ ಒಂದು ಲಕ್ಷ ಝಕಾತ್‌ನ ಹಣವನ್ನು ಸೇರಿಸಿ ಊರಿನ ಅರ್ಹರನ್ನು ಗುರುತಿಸಿಕೊಡಬಹುದಾಗಿದೆ. ಇದಕ್ಕಾಗಿ ಒಬ್ಬ ವ್ಯಕ್ತಿಯನ್ನು ನೇಮಕ ಮಾಡಬಹುದಾಗಿದೆ.
- ಈ ಕ್ರಮದಂತೆ ಒಂದೇ ಮೊಹಲ್ಲಾದ ಮಾಲಕರು ಮಾತ್ರ ಒಟ್ಟು ಸೇರಬೇಕಾಗುತ್ತದೆ. ಹಲವು ಮೊಹಲ್ಲಾಗಳಲ್ಲಿರುವ ಮಾಲಕರ ಝಕಾತನ್ನು ಹೀಗೆ ಒಟ್ಟು ಸೇರಿಸಲಾಗದು. ಝಕಾತನ್ನು ಅರ್ಹರು ತಮ್ಮ ಮೊಹಲ್ಲಾಗಳಲ್ಲಿ ನೀಡುವುದು ಕಡ್ಡಾಯವಿದೆ.
- ಒಂದೇ ಊರಿನಲ್ಲಿರುವ ಹಲವು ಕುಟುಂಬಗಳ ಯಜಮಾನರು ತಮ್ಮ ಫಿತ್ರ್ ಝಕಾತನ್ನು ಒಟ್ಟು ಸೇರಿಸಿ ಅರ್ಹರಿಗೆ ವಿತರಿಸಬಹುದಾಗಿದೆ. ಸಂಗ್ರಹ ಮತ್ತು ವಿತರಣೆಯ ಹಕ್ಕು ಫಿತ್ರ್ ಝಕಾತ್‌ನ ಮಾಲಕರಿಗೆ ಮಾತ್ರ ವಿರುತ್ತದೆ. ಸಂಘಟನೆಗಳಿಗಿರುವುದಿಲ್ಲ. ■

## ಈದ್ ದಿನದಂದು...

ಎರಡು ಈದ್‌ಗಳನ್ನು ತಹ್‌ಲೀಲ್, ತಖ್‌ದೀಸ್, ತಹ್‌ಮೀದ್, ತಕ್‌ಬೀರ್‌ಗಳ ಮೂಲಕ ನೀವು ಅಲಂಕರಿಸಿರಿ ಎಂದು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದಾಗಿ ಅನಸ್ ﵁ ರವರು ವರದಿ ಮಾಡಿದ್ದಾರೆ. ಇಮಾಮ್ ಸುಯೂತ್ವೀ ﵁ ಯವರ ಜಾಮಿಉಲ್ ಅಹಾದೀಸ್‌ನಲ್ಲಿ ಇದನ್ನು ಉಲ್ಲೇಖಿಸಲಾಗಿದೆ.

*ಲಾ ಇಲಾಹ ಇಲ್ಲಲ್ಲಾಹ್, ಸುಬ್‌ಹಾನಲ್ಲಾಹ್, ಅಲ್ ಹಮ್ದುಲಿಲ್ಲಾಹ್, ಅಲ್ಲಾಹು ಅಕ್ಬರ್* ಎಂಬ ದ್ಸಿಕ್ರ್‌ಗಳನ್ನು ಹೇಳುವ ಮೂಲಕ ಈದ್ ದಿನವನ್ನು ಅಂದಗೊಳಿಸಬೇಕೆನ್ನುತ್ತದೆ ಹದೀಸ್.

ಪೂರ್ವಿಕ ವಿದ್ವಾಂಸರಲ್ಲಿ ಹಲವರು ಈದ್ ದಿನದಂದು ಪ್ರತ್ಯೇಕ ಪುಣ್ಯವಿರುವ ಕೆಲವು ದ್ಸಿಕ್ರ್‌ಗಳನ್ನು ತಮ್ಮ ಗ್ರಂಥಗಳಲ್ಲಿ ವಿವರಿಸಿದ್ದಾರೆ.

ಅಹ್ಮದ್ ಬಿನ್ ಹಿಜಾಝ್ ಅಲ್ ಫಶ್‌ನೀ (978) ಯವರ ತುಹ್‌ಫತುಲ್ ಇಖ್ವಾನ್‌ನಲ್ಲಿ *ಸುಬ್‌ಹಾನಲ್ಲಾಹಿ ವಬಿ ಹಮ್ದಿಹೀ* ಎಂಬ ತಸ್ಬೀಹನ್ನು ಈದ್ ನಮಾಝ್‌ಗೆ ಮುನ್ನ 300 ಬಾರಿ ಹೇಳಿ ಮೃತರಿಗೆ ಹದ್‌ಯಾ ಮಾಡುವುದರಿಂದ ಮೃತರಿಗೂ ಅಲ್ಲಾಹನು ಅದರ ವಿಶೇಷ ಪುಣ್ಯ ನೀಡುವನು ಎಂದಿದೆ.

لاَ إِلَهَ إِلاَّ اللَّهُ وَحْدَهُ لاَ شَرِيكَ لَهُ لَهُ الْمُلْكُ وَلَهُ الْحَمْدُ وَهُوَ حَيٌّ
لاَ يَمُوتُ يُحْيِي وَيُمِيتُ بِيَدِهِ الْخَيْرُ وَهُوَ عَلَى كُلِّ شَيْءٍ قَدِيرٌ

*ಲಾ ಇಲಾಹ ಇಲ್ಲಲ್ಲಾಹು ವಹ್‌ಹದು ಲಾ ಶರೀಕಲಹು ಲಹುಲ್ ಮುಲ್ಕು ವಲಹುಲ್ ಹಮ್ದು ಯುಹ್‌ಯೀ ವಯುಮೀತು ವಹುವ ಹಯ್ಯುನ್ ಲಾ ಯಮೂತು ವಹುವ ಅಲಾ ಕುಲ್ಲಿ ಶೈಯಿನ್ ಖದೀರ್*

ಈದ್‌ನ ದಿನ ಈದ್ ನಮಾಝ್‌ಗಿಂತ ಮುಂಚೆ ಈ ದ್ಸಿಕ್ರನ್ನು 400ಬಾರಿ ಹೇಳಿದರೆ ಅಪಾರ ಪುಣ್ಯವಿರುವುದಾಗಿ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಅನಸ್ ﵁ ವರದಿ ಮಾಡಿದ್ದನ್ನು 'ನಿಹಾಯತುಲ್ ಅಮಲ್' ಮತ್ತು 'ತುಹ್ಫತುಲ್ ಇಖ್ವಾನ್'ನಲ್ಲಿ ಉಲ್ಲೇಖಿಸಲಾಗಿದೆ. ಸ್ವರ್ಗದಲ್ಲಿ ಹಲವು ಅನುಗ್ರಹಗಳು ದೊರೆಯುವುದೆಂದು ಕನ್ಝುನ್ನಜಾಹಿ ವಸ್ಸುರೂರ್‌ನಲ್ಲಿದೆ.

ಈದ್‌ದಿನ ಸುಬ್‌ಹ್ ನಮಾಝ್‌ನ ಬಳಿಕ 100 ಬಾರಿ ಇಸ್ತಿಗ್ಫಾರ್ (ಅಸ್ತಗ್‌ಫಿರುಲ್ಲಾಹಲ್ ಅಳೀಂ) ಹೇಳಿದರೆ ಪಾಪಗಳು ಕ್ಷಮಿಸಲ್ಪಡುವುದು. (ಕನ್ಝುನ್ನಜಾಹ್)


## ಮುಹಿಮ್ಮಾತ್ ಶರೀಅತ್ ಕಾಲೇಜು

### ಅರ್ಜಿ ಆಹ್ವಾನ

- ಹಿಮಮೀ ಮುಖ್ತಸರ್ ಪದವಿ ತನಕ ವ್ಯವಸ್ಥಿತ ಧಾರ್ಮಿಕ ಶಿಕ್ಷಣ.
- ಒಂದರಿಂದ ಎಂಟು ತನಕದ ತರಗತಿಗಳಿಗೆ ಪ್ರವೇಶ.
- ಅರ್ಹರಿಗೆ ಫೈನಲ್ ತರಗತಿಗೆ (ಮುಖ್ತಸರ್) ನೇರ ಪ್ರವೇಶ.
- ವಿವಿಧ ಭಾಷಾ ನೈಪುಣ್ಯತೆ ಪಡೆಯಲು ಮತ್ತು ಕಂಪ್ಯೂಟರ್ ಕಲಿಕೆಗೆ ಅವಕಾಶ.
- ಉಚಿತ ಆಹಾರ ವಸತಿ ಜತೆಗೆ ಶಿಷ್ಯವೇತನ.
- ಹಿಮಮೀ ಪದವಿ ಬಳಿಕ ಉನ್ನತ ಯುನಿವರ್ಸಿಟಿಗಳಿಗೆ ಪ್ರವೇಶ ಸೌಲಭ್ಯ.

ಅಪೇಕ್ಷೆ ಸ್ವೀಕೃತಿಯ ಕೊನೆಯ ದಿನಾಂಕ ಆಗಸ್ಟ್ 31
ಪ್ರವೇಶ ಪರೀಕ್ಷೆ ಸಪ್ಟೆಂಬರ್ 8

ಅಪೇಕ್ಷಾ ಫಾರಮ್‌ಗಳಿಗಾಗಿ ಮುಹಿಮ್ಮಾತ್ ಕಛೇರಿಯನ್ನು ಸಂಪರ್ಕಿಸಬಹುದು. ಇಲ್ಲವೇ www.muhimmath.comನಿಂದ ಫಾರಮ್ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಪ್ರಿನ್ಸಿಪಾಲ್

MUHIMMATHUL MUSLIMEEN EDUCATION CENTRE
MUHIMMATH NAGAR, P.O.PUTHIGE, KUMBLA,
KASARAGOD. email: muhimmath@gmail.com
9446987064, 9447490738, 04998-245214, 245814

## ವಚನ ಪಾಲನೆ

ಅಬ್ದುಲ್ಲಾಹಿಬ್ನು ಅಬಿಲ್ ಹಂಝಾ ﵁ ಹೇಳುತ್ತಾರೆ; ಪ್ರವಾದಿತ್ವ ಪ್ರಾಪ್ತಿಗಿಂತ ಮುಂಚೆ ನಾನು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಒಂದು ವ್ಯವಹಾರ ನಡೆಸಿದ್ದೆ. ಅದರಲ್ಲಿ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸ್ವಲ್ಪ ಕೊಡುವುದಕ್ಕೆ ಬಾಕಿಯಿತ್ತು. ಒಮ್ಮೆ ಅವರನ್ನು ಭೇಟಿ ಮಾಡಿದಾಗ ನಾನು, 'ನೀವಿಲ್ಲಿ ನಿಲ್ಲಿ. ಈಗ ಬರುತ್ತೇನೆ' ಎಂದು ಹೇಳಿ ಹೋದೆ. ಆದರೆ ನನಗಿದು ಮರೆತು ಹೋಗಿತ್ತು. ಮೂರು ದಿನಗಳ ಬಳಿಕ ನೆನಪಾಗಿ ಕೂಡಲೇ ಅವರನ್ನು ನಿಲ್ಲಿಸಿ ಬಂದ ಜಾಗಕ್ಕೆ ಓಡಿದೆ. ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲೇ ಇದ್ದರು! 'ಯುವಕಾ! ನನಗೆ ತೊಂದರೆ ಮಾಡಿದಿರಲ್ಲಾ! ಮೂರು ದಿನಗಳಿಂದ ನಿಮ್ಮನ್ನು ಕಾಯುತ್ತಾ ಇಲ್ಲಿದ್ದೇನೆ' ಎಂದು ಹೇಳಿದರು. (ಶರಹುಶ್ಶಿಫಾ)

ಹುದೈಬಿಯಾ ಒಪ್ಪಂದದ ಒಂದು ಅಂಶವಾಗಿತ್ತು ಮಕ್ಕಾದಿಂದ ಯಾರಾದರೂ ಅಮುಸ್ಲಿಮರು ಮದೀನಾಕ್ಕೆ ಬಂದು ಆಶ್ರಯ ಕೇಳಿದರೆ ಅವರನ್ನು ಮರಳಿ ಕಳುಹಿಸಬೇಕು ಮತ್ತು ಮದೀನಾದಿಂದ ಯಾರಾದರೂ ಮುಸ್ಲಿಮರು ಮಕ್ಕಾದ ಅಮುಸ್ಲಿಮರ ಬಳಿ ಬಂದರೆ ಅವರನ್ನು ಮರಳಿಸಬೇಕಾಗಿಲ್ಲ ಎಂಬುದು. ಒಪ್ಪಂದ ಜಾರಿಗೆ ಬರುವ ಮುನ್ನವೇ ಅಬೂಜನ್ದಲ್ ﵁ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿ ಬಂದು ಆಶ್ರಯ ಬೇಡಿದರು. ಮನಸ್ಸಿಗೆ ತುಂಬ ನೋವಾದರೂ ಹುದೈಬಿಯಾ ಒಪ್ಪಂದದ ಮಾತು ಉಳಿಸುವುದಕ್ಕಾಗಿ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಅಬೂ ಜನ್ದಲ್‌ರನ್ನು ಮಕ್ಕಕ್ಕೆ ಮರಳಿಸಿದರು. (ಅಲ್ ಇನ್ಸಾನುಲ್ ಕಾಮಿಲ್)

# ಅನುಪಮ ಧೈರ್ಯಶಾಲಿ

## ಧೈರ್ಯ

ಬರಾಅ್ ಬಿನ್ ಆಝಿಬ್ ﵁ ರಿಂದ ವರದಿ. ಹುನೈನ್ ಯುದ್ಧ ದಿನ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಹೇಸರಗತ್ತೆಯ ಕಡಿವಾಣ ಅಬೂಸುಫ್ಯಾನ್ ಬಿನ್ ಹಾರಿಸ್ ﵁ ಹಿಡಿದಿದ್ದರು. ಆ ನಡುವೆ ಶತ್ರುಗಳು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಮುತ್ತಿಗೆ ಹಾಕಿದರು. ಆಗ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಕತ್ತೆಯ ಮೇಲಿಂದ ಕೆಳಗಿಳಿದು ಹೇಳಿದರು; 'ನಾನು ಪ್ರವಾದಿ. ಸುಳ್ಳಲ್ಲ. ನಾನು ಅಬ್ದುಲ್ ಮುತ್ತಲಿಬರ ಮಗ' ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಧೈರ್ಯವೂ ಶಕ್ತಿಯೂ ಇದ್ದ ಯಾರೊಬ್ಬರೂ ಅಲ್ಲಿರಲಿಲ್ಲ. (ಬುಖಾರಿ, ಮುಸ್ಲಿಂ, ಅಶ್ಶಿಫಾ)

ಅನಸ್ ﵁ ರಿಂದ ವರದಿ. ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಜನರಲ್ಲಿ ಅತ್ಯಂತ ಶ್ರೇಷ್ಠ ವ್ಯಕ್ತಿಯೂ ಮನುಷ್ಯರಲ್ಲಿ ಅನುಪಮರೂ, ಉದಾರಮತಿಯೂ, ಧೈರ್ಯಶಾಲಿಯೂ ಆಗಿದ್ದರು. ಒಂದು ದಿನ ರಾತ್ರಿ ಒಂದು ಭಯಂಕರ ಸದ್ದು ಕೇಳಿ ಮದೀನಾದ ಜನರೆಲ್ಲ ನಡುಗಿದರು. ಕೆಲವರು ಶಬ್ಧ ಕೇಳಿದ ದಿಕ್ಕಿಗೆ ಹೊರಟರು. ಆಗ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಎದುರುಗೊಂಡರು. ಅದಾಗಲೇ ಶಬ್ಧ ಕೇಳಿದ ಸ್ಥಳಕ್ಕೆ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೋಗಿ ನೋಡಿ ಮರಳುತ್ತಿದ್ದರು! ಯಾರೂ ಹೆದರಬೇಡಿ ಎಂದು ಕೂಗಿ ಹೇಳುತ್ತಿದ್ದರು. ಅಬೂತ್ವಲ್ಹತ್ ﵁ ರವರ ಕುದುರೆಯಲ್ಲಾಗಿತ್ತು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೋದುದು. ಕುದುರೆಗೆ ಜೀನು ಹಾಕಿರಲಿಲ್ಲ. ಕುತ್ತಿಗೆಯಲ್ಲಿ ಖಡ್ಗ ನೇತಾಡುತ್ತಿತ್ತು. ಕುದುರೆಯು ಸಮುದ್ರದಂತೆ ನನಗೆ ಭಾಸವಾಯಿತು ಎಂದು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು. (ಬುಖಾರಿ, ಮುಸ್ಲಿಂ)

23



ಕಾಂತಪುರಂ ಎ.ಪಿ.
ಅಬೂಬಕರ್ ಮುಸ್ಲಿಯಾರ್

ಅಲಿ ﵁ ಹೇಳುತ್ತಾರೆ; ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ತಾವು ಭಾಗವಹಿಸಿದ ಯಾವುದೇ ಯುದ್ಧಗಳಲ್ಲಿ ಒಂದಿಂಚು ಕೂಡಾ ಹಿಂದೆ ಸರಿದಿರಲಿಲ್ಲ. ಧೀರರಾದ ಸ್ವಹಾಬಿಗಳು ಕೂಡಾ ರಣರಂಗದಲ್ಲಿ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಆಶ್ರಯ ಪಡೆದಿದ್ದರು. (ಮುಸ್ನದ್ ಅಹ್ಮದ್, ಇಬ್ನುಲ್ ಜೌಝಿ)

ಅಲೀ ﵁ ಹೇಳುತ್ತಾರೆ; ಯುದ್ಧರಂಗವು ಕಾವೇರಿದಾಗ, ಹೋರಾಟ ತೀವ್ರಗೊಂಡಾಗ ನಾವು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಎದುರು ನಿಲ್ಲಿಸಿ ಶತ್ರುಗಳಿಂದ ರಕ್ಷಣೆ ಬಯಸುತ್ತಿದ್ದೆವು. ಆ ಸಂದರ್ಭಗಳಲ್ಲಿ ಶತ್ರುಗಳಿಗೆ ಅತ್ಯಂತ ಹತ್ತಿರದಲ್ಲಿರುವವರು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಆಗಿದ್ದರು. ಬದ್‌ರ್‌ನಲ್ಲಿ ಶತ್ರುಗಳ ಜತೆ ನೇರಾನೇರ ಯುದ್ಧ ನಡೆಸಿದವರು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು. (ಇಬ್ನು ಹಿಶಾಂ, ಇಬ್ನುಲ್ ಜೌಝಿ)

ಬದ್‌ರ್ ಯುದ್ಧದಲ್ಲಿ ಬಂಧಿತನಾಗಿದ್ದ ಉಬಯ್ಯ್ ಬಿನ್ ಖಲಫ್ ಎಂಬ ಶತ್ರು, ದಂಡಪಾವತಿಸಿ ಬಿಡುಗಡೆಯಾಗುವ ವೇಳೆ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನೋಡಿ ಹೇಳಿದ; "ದಿನವೂ ಹದಿನಾರು ರಾತಲ್ ಬೆಲೆಯ ಜೋಳ ತಿನ್ನಿಸಿ ಬೆಳೆಸುತ್ತಿರುವ ನನ್ನ ಕುದುರೆಯ ಮೇಲೇರಿ ನಿನ್ನನ್ನು ನಾನು ಕೊಲ್ಲುವೆ."

"ಇನ್‌ಶಾ ಅಲ್ಲಾಹ್ - ನಿನ್ನನ್ನು ಕೊಲ್ಲುವುದು ನಾನೇ" ಎಂಬುದಾಗಿತ್ತು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರತಿಕ್ರಿಯೆ.

ಉಹ್ದ್‌ನ ರಣರಂಗದಲ್ಲಿ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಕೋಪದ ಬೆಂಕಿಯುಗುಳುತ್ತಾ ಉಬಯ್ಯ್ ಬಿನ್ ಖಲಫ್ ಕೂಗತೊಡಗಿದ; 'ಮುಹಮ್ಮದ್ ಎಲ್ಲಿ?' ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕಂಡ ಕೂಡಲೇ ಕುದುರೆಯೇರಿ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಜಿಗಿಯಲು ಬಂದ ಉಬಯ್ಯ್‌ನನ್ನು ತಡೆಯಲು ಮುಸ್ಲಿಂ ಸೈನಿಕರು ಮುಂದಾದರು. ಆಗ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು 'ಅವನನ್ನು ಬಿಟ್ಟು ಬಿಡಿ' ಎಂದರು. ನಂತರ ಹಾರಿಸ್ ಬಿನ್ ಸುಮ್ಮಾ ﵁ ಎಂಬ ಸ್ವಹಾಬಿಯ ಕೈಯಲ್ಲಿದ್ದ ಆಯುಧವನ್ನು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ತೆಗೆದು ಕೊಂಡು ಉಬಯ್ಯ್‌ನ ಮೇಲೆ ಎಸೆದದ್ದೇ ತಡ, ಶತ್ರುಗಳೆಲ್ಲ ಓಡೋಡಿ ಹೋದರು. ಆಯುಧ ಉಬಯ್ಯ್‌ನ ಬೆನ್ನಿಗೇ ಬಿದ್ದಿತ್ತು. ಆತ ಗಾಯಗೊಂಡು ಕುದುರೆಯಿಂದ ನೆಲಕ್ಕುರುಳಿದ. 'ನನ್ನನ್ನು ಕೊಂದರು...' ಎಂದು ಬೊಬ್ಬಿಡುತ್ತಾ ಮೆಲ್ಲನೆ ಎದ್ದು ಖುರೈಶರ ಬಳಿ ಓಡಿದ. ಪರವಾಗಿಲ್ಲ ಎಂದು ಜನ ಅವನನ್ನು ಸಮಾಧಾನ ಪಡಿಸಿದಾಗ ಅವನು ಹೇಳಿದ; ನಾನು ಅನುಭವಿಸುತ್ತಿರುವ ನೋವನ್ನು ನೀವೆಲ್ಲರೂ ಒಟ್ಟಾಗಿ ಅನುಭವಿಸುತ್ತಿದ್ದರೆ ಎಲ್ಲರೂ ಸಾಯುತ್ತಿದ್ದಿರಿ. ಯುದ್ಧ ಮುಗಿದು ಮರಳುವಾಗ ಅವನು ಸತ್ತ. ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಕೈಯಿಂ ದ ಹತನಾದ ಏಕೈಕ ವ್ಯಕ್ತಿ ಉಬಯ್ಯ್ ಬಿನ್ ಖಲಫ್. (ಶರಹುಶ್ಶಿಫಾ)

ಮಕ್ಕಕ್ಕೆ ಬಂದ ಒಬ್ಬ ವಿದೇಶಿಯಿಂದ ಅಬೂಜಹಲ್ ಒಂದು ಕುದುರೆಯನ್ನು ಬೆಲೆಗೆ ಪಡೆದುಕೊಂಡ. ಆದರೆ ಹಣ ಪಾವತಿಸದೆ ವಿದೇಶಿಯನ್ನು ಗೋಳು ಹೊಯ್ದ. ಆ ವ್ಯಕ್ತಿ ಖುರೈಶೀ ಪ್ರಮುಖರಿಗೆ ದೂರು ನೀಡಿದ. ಅವರು ಕಅ್‌ಬಾದ ಬಳಿ ಕೂತಿದ್ದ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ತೋರಿಸಿ, 'ಆ ವ್ಯಕ್ತಿಯಲ್ಲಿ ಹೇಳಿ, ತೆಗೆದು ಕೊಡಬಹುದು' ಎಂದರು. ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ತಮಾಷೆ ಮಾಡುವುದಕ್ಕಾಗಿ ಅವರು ಹಾಗೆ ಹೇಳಿದ್ದರು. ವಿದೇಶಿ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿ ಬಂದು ದೂರು ಹೇಳಿದಾಗ, ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಅವನನ್ನು ಕರೆದುಕೊಂಡು ಅಬೂಜಹಲನ ಮನೆಗೆ ಹೋದರು. ಅಬೂಜಹಲನನ್ನು ಕರೆದು ಹೇಳಿದರು; 'ಅಬುಲ್‌ಹಕಂ! ಈ ವಿದೇಶಿಗೆ ಕೊಡಬೇಕಾದ ಹಣವನ್ನು ಕೊಡಿರಿ.' ಕೊಡುತ್ತೇನೆ ಎನ್ನುತ್ತಾ ಅಬೂಜಹಲ್ ಹಣವನ್ನು ತಂದು ಕೊಟ್ಟ! ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಧೈರ್ಯದ ಮುಂದೆ ವಿಧೇಯ ಹುಡುಗನಂತೆ ವರ್ತಿಸುವುದಕ್ಕಷ್ಟೇ ಆ ಶತ್ರು ನಾಯಕನಿಗೆ ಸಾಧ್ಯವಾಯಿತು. (ಖಸಾಇಸುಲ್ ಕುಬ್‌ರಾ) ■

## ಮಯ್ಯಿತ್ ನಮಾಝ್‌ಗೆ ಅಭ್ಯರ್ಥನೆ

ಹಾಜಿ ಶಂಸುದ್ದೀನ್ ಕಟಪಾಡಿ ಇವರ ತಾಯಿಯವರಾದ
**ಫಾತಿಮಾಭಿ** ಇವರು ತಾ.9.8.2011ನೇ
ಮಂಗಳವಾರದಂದು ಅಲ್ಲಾಹುವಿನ ಅನುಲ್ಲಂಘನೀಯ ವಿಧಿಗೆ
ವಿಧೇಯರಾಗಿರುತ್ತಾರೆ.
*ಅವರ ಹೆಸರಲ್ಲಿ ಮಯ್ಯಿತ್ ನಮಾಝ್ ನಿರ್ವಹಿಸಿ*
*ಮಗ್ಫಿರತ್‌ಗಾಗಿ ಪ್ರಾರ್ಥಿಸಬೇಕಾಗಿ ಸರ್ವ ಜಮಾಅತರಲ್ಲಿ ಈ*
*ಮೂಲಕ ವಿನಂತಿಸುತ್ತೇವೆ.*

ಹಾಜಿ ಶಂಸುದ್ದೀನ್ ಮತ್ತು
ಕುಟುಂಬಸ್ಥರು, ಕಟಪಾಡಿ

## ಮಯ್ಯಿತ್ ನಮಾಝ್‌ಗೆ ಅಭ್ಯರ್ಥನೆ



ಮೂಳೂರು ಜಬ್ಬಾರ್ ಮಸ್ತಾನ್‌ರವರ ಖಾದಿಮ್
**ಎಂ.ಅಹ್ಮದ್ ಬ್ಯಾರಿ**
**ಮೂಳೂರು**ರವರು ಇತ್ತೀಚೆಗೆ
ಅಲ್ಲಾಹುವಿನ ಅನುಲ್ಲಂಘನೀಯ ವಿಧಿಗೆ
ವಿಧೇಯರಾಗಿರುತ್ತಾರೆ. (ಇನ್ನಾಲಿಲ್ಲಾಹಿ...)
*ಅವರ ಮಗ್ಫಿರತ್‌ಗಾಗಿ ಪ್ರಾರ್ಥಿಸಿ,*
*ಮಯ್ಯಿತ್ ನಮಾಝ್ ನಿರ್ವಹಿಸಲು ಸರ್ವ*
*ಜಮಾಅತರಲ್ಲಿ ಈ ಮೂಲಕ ವಿನಂತಿ.*

ಇತೀ, ಕುಟುಂಬಸ್ಥರು

# ಮುದ್ದು ಮುತ್ತಾಯಿತು!!

ಒಮ್ಮೆ ಅಗರ್ಭ ಶ್ರೀಮಂತ ವ್ಯಕ್ತಿಯೊಬ್ಬರು ಮರಣಹೊಂದಿದರು. ವಾರೀಸುಸೊತ್ತಾಗಿ ಅವರು ಅಪಾರ ಸಂಪತ್ತನ್ನು ತ್ಯಜಿಸಿ ಹೋಗಿದ್ದರು. ಈ ಕಾರಣದಿಂದ ಅವರ ಓರ್ವ ಮಗನಿಗೆ ಒಂದು ಲಕ್ಷ ದೀನಾರ್ ವಾರೀಸು ಸೊತ್ತಾಗಿ ಲಭಿಸಿತು. ಆತನು ಅದನ್ನು ಹಿಡಿದು ಕೊಂಡು ಮಹಾನ್ ಸೂಫೀ ವರ್ಯರಾದ ದುನ್ನೂನುಲ್ ಮಿಸ್ರೀ رضي الله عنه ರವರ ಸಾನಿಧ್ಯಕ್ಕೆ ಬಂದನು. ಅವರ ಮುಂದೆ ವಿನಯಾನ್ವಿತನಾಗಿ ಬಾಗಿನಿಂತು, "ಮಹಾತ್ಮರೇ, ನನಗೆ ನನ್ನ ತಂದೆಯವರು ಬಿಟ್ಟು ಹೋದ ಸಂಪತ್ತಿನಿಂದ ಒಂದು ಲಕ್ಷ ದೀನಾರ್ ವಾರೀಸು ಸೊತ್ತಾಗಿ ಲಭಿಸಿದೆ. ಅದನ್ನು ನಾನು ತಮಗಾಗಿ ಖರ್ಚು ಮಾಡಲೇ ?" ಎಂದು ಕೇಳಿದ.

ಹುಡುಗನ ಮಾತುಕೇಳಿ ಮಹಾತ್ಮರು ಮುಗುಳ್ನಕ್ಕರು. ನಂತರ, "ನೀನು ಪ್ರೌಡಾವಸ್ಥೆಗೆ ತಲುಪಿರುವೆಯಾ ?" ಎಂದು ಕೇಳಿದರು. ಹುಡುಗ "ಇಲ್ಲ" ಎಂದು ಉತ್ತರಿಸಿದ. "ಯಾವಾಗ ನೀನು ಪ್ರೌಡಾವಸ್ಥೆಗೆ ತಲುಪುವುದಿಲ್ಲವೊ ಅಲ್ಲಿಯವರೆಗಗೆ ನಿನಗಿದರ ಹಣವನ್ನು ವ್ಯಯಿಸುವುದು ಅನುವದನೀಯವಲ್ಲ" ಎಂದರು. ಹುಡುಗ, "ಆಯಿತು" ಎಂದು ಹೇಳುತ್ತಾ ಆ ದೀನಾರ್‌ಗಳನ್ನು ಹಿಡಿದುಕೊಂಡು ಮನೆಗೆ ಮರಳಿದ.

ದಿನಗಳು ಉರುಳಿತು. ಹುಡುಗ ಪ್ರೌಡಾವಸ್ಥೆಗೆ ತಲುಪಿದ. ಒಂದು ದಿನ ಆತ ಅದೇ ಒಂದು ಲಕ್ಷ ದೀನಾರ್‌ಗಳನ್ನು ಹಿಡಿದುಕೊಂಡು ಮಹಾತ್ಮರ ಬಳಿಗೆ ಹಾಜರಾದ. "ಮಹಾತ್ಮರೇ ನಾನೀಗ ಪ್ರೌಡಾವಸ್ಥೆಗೆ ತಲುಪಿದ್ದೇನೆ" ಎಂದು ಹೇಳಿ ತನ್ನಲ್ಲಿದ್ದ ದೀನಾರ್‌ಗಳನ್ನು ಅಲ್ಲಿದ್ದ ಸಂತರಿಗೆ ದಾನಮಾಡಿ ಬಿಟ್ಟ.




ಒಂದು ದಿನ ಆತ ಸಂತರು ವಾಸಿಸುತ್ತಿದ್ದ ಆಶ್ರಮಕ್ಕೆ ಬಂದ. ಅದೇ ವೇಳೆ ಅವರಲ್ಲಿ ಕೆಲವರಿಗೆ ಹಣದ ಆವಶ್ಯಕತೆಯಿತ್ತು. ಅದನ್ನವರು ಆತನ ಬಳಿ ಭಿನ್ನವಿಸಿಕೊಂಡರು. ಆತ ದೀರ್ಘ ನಿಟ್ಟುಸಿರು ಬಿಡುತ್ತಾ "ಅರೆ, ಈಗೇನ್ಮಾಡ್ಲಿ? ನನ್ನ ಬಳಿ ಒಂದು ಲಕ್ಷ ದೀನಾರ್ ಇರುತ್ತಿದ್ದರೆ ನಾನದನ್ನು ಎಲ್ಲವನ್ನೂ ತಮಗೆ ನೀಡುತ್ತಿದ್ದೆ"ಎಂದ.

ಸನಿಹದಲ್ಲೇ ಕುಳಿತಿದ್ದ ದುನ್ನೂನುಲ್ ಮಿಸ್ರೀ رضي الله عنه ರವರಿಗೆ ಇದು ಕೇಳಿ ನಗುಬಂತು, ಈತ ಅಲ್ಲಾಹನು ತನ್ನ ಇಷ್ಟದಾಸರಿಗೆ ನೀಡಿದ ಮಹಿಮೆ ಮತ್ತು ಸಾಮರ್ಥ್ಯದ ಬಗ್ಗೆ ಅರಿಯದವನಾಗಿದ್ದಾನೆ. ಇವನು ಐಹಿಕ ಸಂಪತ್ತಿನಿಂದ ಮಾತ್ರವೇ ಸೂಫೀಸಂತರು ಬದುಕುತ್ತಿರುವುದೆಂದು ಭಾವಿಸಿದ್ದಾನೆ ಎಂದು ಮನದಲ್ಲೇ ಹೇಳುತ್ತಾ, ಅವನನ್ನು ಹತ್ತಿರ ಕರೆದರು "ನೀನು ಪೇಟೆಯಲ್ಲಿರುವ ಔಷದಿಯಂಗಡಿಗೆ ಹೋಗಿ ಮೂರು ದೀನಾರಿನ ಗಿಡ ಮೂಲಿಕೆಗಳನ್ನು ಪಡೆದುಕೊಂಡು ಬಾ ಎಂದು ಆಜ್ಞಾಪಿಸಿದರು. ಯುವಕ ಪೇಟೆಗೆ ಹೋಗಿ ಗಿಡ ಮೂಲಿಕೆಗಳೊಂದಿಗೆ ಮರಳಿದ.

ಮಹಾತ್ಮರು ಅದನ್ನು ಒರಳು ಕಲ್ಲಿನಲ್ಲಿ ಉಜ್ಜಿ ನಂತರ ಅದನ್ನು ಎಣ್ಣೆಗೆ ಹಾಕಿ ಗೋಲಿಗಳಂತೆ ಮಾಡಲು ಹೇಳಿದರು. ಯುವಕ ಹಾಗೆಯೇ ಮಾಡಿದ. ನಂತರ ಮಹಾತ್ಮರು ಪ್ರತಿಯೊಂದಕ್ಕೆ ಸೂಜಿಯಿಂದ ರಂಧ್ರ ಮಾಡಿ ದಾರದಿಂದ ನೇಯುವಂತೆ ಹೇಳಿದರು. ಯುವಕ ಹಾಗೆಯೇ ಮಾಡಿ ಮಹಾತ್ಮರ ಕೈಗೆ ನೀಡಿದರು. ದುನ್ನೂನುಲ್ ಮಿಸ್ರೀ رضي الله عنه ರವರು ಹಾರದಂತಿದ್ದ ಅದಕ್ಕೆ ಏನನ್ನೋ ಓದಿ, ಊದಿದರು. ಏನಾಶ್ಚರ್ಯ!! ಆ ಗೋಲಿಗಳು ಆ ಕ್ಷಣದಲ್ಲೇ ಮುತ್ತುಗಳಾಗಿ ಹೊಳೆಯ ತೊಡಗಿತು! ಸಾಕ್ಷಾತ್ ಮುತ್ತಿನ ಸರ!! ಯುವಕ ಬೆರಗು ಗಣ್ಣಿನಿಂದ ಇದನ್ನೆಲ್ಲ ನೋಡುತ್ತಿದ್ದ. ನಂತರ ಮಹಾತ್ಮರು ಇದನ್ನು ಪೇಟೆಗೆ ಕೊಂಡುಹೋಗಿ ಎಷ್ಟು ಬೆಲೆಬಾಳಬಹುದೆಂದು ನೋಡಿಬರುವಂತೆ ಆಜ್ಞಾಪಿಸಿದರು. ಯುವಕ ಪೇಟೆಗೆ ಹೋಗಿ ವಜ್ರದಂಗಡಿಯವರಲ್ಲಿ ಅದರ ಬೆಲೆಯ ಕುರಿತು ವಿಚಾರಿಸಿದಾಗ ಪ್ರತಿಯೊಂದು ಗೋಲಿಯು ಒಂದು ಲಕ್ಷ ದೀನಾರ್ ಮೌಲ್ಯವುಳ್ಳದ್ದು ಎಂದು ಹೇಳಿದರು.

ಯುವಕ ಹಾಗೆಯೇ ಮಹಾತ್ಮರ ಬಳಿ ಬಂದು ಹೇಳಿದ. ದುನ್ನೂನುಲ್ ಮಿಸ್ರೀ رضي الله عنه ರವರು ಆ ಯುವಕನ ಕೈಯಲ್ಲಿದ್ದ ಮುತ್ತಿನ ಹಾರವನ್ನು ಪಡೆದು ಒರಳು ಕಲ್ಲಿಗೆ ಹಾಕಿ ಪುಡಿ ಪುಡಿ ಮಾಡಿದರು. ನಂತರ ಯುವಕನ ಮುಖನೋಡಿ, "ಇನ್ನು ಮುಂದೆ ಅಲ್ಲಾಹನ ಇಷ್ಟದಾಸರಾದ ಸೂಫೀ ಸಂತರು ರೊಟ್ಟಿಗಾಗಿ, ಹಣಕ್ಕಾಗಿ ಪರಿತಪಿಸುತ್ತಿದ್ದಾರೆಂದು ಎಂದೂ ಭಾವಿಸದಿರು; ಅವರ ಬಳಿ ಎಲ್ಲವೂ ಲಭ್ಯವಿದೆ " ಎಂದರು. ಯುವಕನಿಗೀಗ ಜ್ಞಾನೋದಯವಾಯಿತು. ಅಲ್ಲಾಹನ ಔಲಿಯಾಗಳು ಮತ್ತು ಸೂಫಿ ಸಂತರ ಮಹಿಮೆಯನ್ನು ಅರಿಯುವುದರೊಂದಿಗೆ ಐಹಿಕ ಸಂಪತ್ತು ನಗಣ್ಯವೆಂಬ ವಾಸ್ತವ ಮನವರಿಕೆಯಾಯಿತು.

- ನಈಮಿ




# ಸುನ್ನತ್ ಯಾಕೆ? ಫರ್ಳ್ ಸಾಕಾಗುವುದಿಲ್ಲವೇ?

ಅಹ್ಮದ್‌ಯಾರ್ ಖಾನ್ ನಈಮಿ
ಕನ್ನಡಕ್ಕೆ: ನಈಮಿ ಮಂಗಳಪೇಟೆ

*ಪ್ರಶ್ನೆ: ಅಲ್ಲಾಹನ ದಾಸರಾದ ನಮಗೆ ಫರ್ಳ್ ನಮಾಝ್‌ಗಳನ್ನಷ್ಟೇ ಕಡ್ಡಾಯವಾಗಿ ವಿಧಿಸಲಾಗಿದೆ. ಆದರೂ ಸುನ್ನತ್ ನಮಾಝ್‌ಗಳನ್ನು ಯಾಕೆ ನಿರ್ವಹಿಸಬೇಕು? ನಮ್ಮ ಮೇಲೆ ವಿಧಿಸಲ್ಪಟ್ಟ ಕಡ್ಡಾಯ ಕರ್ಮಗಳಷ್ಟೇ ಮಾಡಿದರೆ ಸಾಲದೆ?*

ಉತ್ತರ : ಆಹಾರ ತಯಾರಿಸುವಾಗ ಮತ್ತು ಸೇವಿಸುವಾಗ ನೀರು ಹೇಗೆ ನಮಗೆ ಅತ್ಯಗತ್ಯವೋ ಅದೇರೀತಿ ಸುನ್ನತ್‌ಗಳೂ ಕೂಡಾ. ಔತಣವೇರ್ಪಡಿಸಿದವನು ಬರೀ ಅನ್ನವನ್ನಷ್ಟೆ ಕೊಟ್ಟು ನೀರು ಕೊಡದಿದ್ದರೆ ಆತಿಥ್ಯಕ್ಕೊಂದು ಕೊರತೆ. ಇದೇ ರೀತಿ ಸುನ್ನತ್‌ಗಳಿಲ್ಲದ ಬರಿ ಕಡ್ಡಾಯ ನಮಾಝ್ ಕೂಡಾ ಪ್ರತಿಫಲದಲ್ಲಿ ಅಪೂರ್ಣ.

ನಮಾಝ್‌ನಲ್ಲಿ ಸೂರತ್ ಪಠಿಸುವುದು, ದ್ಸಿಕ್ರ್‌ಗಳನ್ನು ಹೇಳುವುದು ಮುಂತಾದವುಗಳು ಸುನ್ನತ್‌ಗಳಾಗಿದ್ದರೂ ಅದನ್ನು ಇತರ ಕಡ್ಡಾಯ ಕರ್ಮಗಳೊಂದಿಗೆ ನಿರ್ವಹಿಸಬೇಕು. ಫರ್ಳ್ ನಮಾಝ್‌ನ ಪರಿಪೂರ್ಣತೆಗೆ ಅದರ ಮುಂಚೆ ಮತ್ತು ನಂತರವಿರುವ ಸುನ್ನತ್ ನಮಾಝ್‌ಗಳನ್ನು ನಿರ್ವಹಿಸಬೇಕು.

ಓರ್ವ ಮುಸ್ಲಿಂ ವ್ಯಕ್ತಿ ಪ್ರೌಢಾವಸ್ಥೆಗೆ ತಲುಪಿದ ನಂತರವೇ ಆತನ ಮೇಲೆ ಕಡ್ಡಾಯ ಕಾರ್ಯಗಳನ್ನು ನಿರ್ವಹಿಸುವುದು ಕಡ್ಡಾಯವಾಗುತ್ತದೆ. ಆದರೆ ಸುನ್ನತ್ ಆದ ಕರ್ಮಗಳು ಆತನ ಜನನದೊಂದಿಗೆ ಪ್ರಾರಂಭವಾಗಿರುತ್ತದೆ. ಉದಾ: ಸುನ್ನತ್ ಕರ್ಮ, ನಾಮಕರಣ ಮಾಡುವುದು ಮುಂತಾದವುಗಳು ಪ್ರವಾದಿ ಚರ್ಯೆಯಾಗಿದ್ದು ಮಗು ಪ್ರೌಢಾವಸ್ಥೆಗೆ ತಲುಪುವ ಮುಂಚೆಯೇ ಅದನ್ನು ನಿರ್ವಹಿಸಲಾಗುತ್ತದೆ. ಅದೇ ರೀತಿ ಮರಣದೊಂದಿಗೆ ಕಡ್ಡಾಯ ಕರ್ಮಗಳ ಪಾಲನೆ ಕೊನೆಗೊಂಡರೂ ಕಫನ ಮಾಡುವುದು, ಮುಂತಾದವುಗಳು ಪ್ರವಾದಿ ಚರ್ಯೆಯೆಂಬ ನಲೆಯಲ್ಲಿ ಜಾರಿಯಲ್ಲಿರುತ್ತದೆ. ■



Specialist in :
Burkha Stitching as per
your choice
Since 1999


Shop # E - 9
TOKYO MARKET
G.H.S.Road, Hampankatta,
MANGALORE-1.
Ph : 0824-2447314

Shop # E-9
KUNIL CENTRE
G.H.S.Road, Hampankatta, Mangalore-1.
Ph : 0824-4257315

# FiF 15 (A), 5th Floor
CITY CENTRE MALL
Next to spar Hypermarket, K.S.Rao Road, Hampankatta, Mangalore-1.
Ph : 0824-4257316

Mob : 9886571883
Email : burkha.fashion@yahoo.com

ವಿಖ್ಯಾತ ಇಂಗ್ಲೀಷ್ ಚಿಂತಕನಾದ ಮಾರ್ಟಿನ್ ಲಂಜರ್ ಆರಂಭ ಕಾಲದಲ್ಲಿ ಕ್ರೈಸ್ತ ಧರ್ಮದ ಅನುಯಾಯಿಯಾಗಿದ್ದರು. ಅದರ ಕುರಿತು ಅವರಿಗೆ ಹೆಚ್ಚೇನೂ ತಿಳಿದಿರಲಿಲ್ಲ. ಅವರ ಪೂರ್ವ ಪಿತಾಮಹರು ಅನುಸರಿಸಿ ಬರುತ್ತಿದ್ದ ಧರ್ಮ ಎಂಬುದನ್ನು ಬಿಟ್ಟರೆ ಅವರ ಕುಟುಂಬಕ್ಕೂ ಹೆಚ್ಚೇನೂ ತಿಳಿದಿರಲಿಲ್ಲ. ಇದರೆಡೆಯಲ್ಲಿ ಮಾರ್ಟಿನ್ ಒಂದು ದೃಢ ವಿಶ್ವಾಸವಿಲ್ಲದೆ ಬದುಕುತ್ತಿದ್ದರು. ಆಕ್ಸ್‌ಫರ್ಡ್ ಯುನಿವರ್ಸಿಟಿಯಲ್ಲಿ ಇಂಗ್ಲೀಷ್ ಸಾಹಿತ್ಯವನ್ನು ಅಧ್ಯಯನ ಮಾಡುತ್ತಿದ್ದ ವೇಳೆ ಇವರಿಗೆ ಇಸ್ಲಾಮಿನ ಬಗ್ಗೆ ತಿಳುವಳಿಕೆಯಾಗುತ್ತದೆ. ಇಸ್ಲಾಮಿನ ಕುರಿತಾದ ಅನೇಕ ಪುಸ್ತಕಗಳ ವಾಚನವು ಇವರನ್ನು ಒಂದು ಹೊಸ ಪ್ರಪಂಚದತ್ತ ಕೊಂಡೊಯ್ಯುತ್ತದೆ. ಮಾತಿನೊಂದಿಗೂ, ಕೃತಿಯೊಂದಿಗೂ, ಬುದ್ಧಿಯೊಂದಿಗೂ ಯೋಚಿತವಾದ ಧರ್ಮವೇ ಇಸ್ಲಾಮ್ ಎಂದು ಅವರು ತೆರೆದು ಹೇಳುತ್ತಾರೆ.

## ಗಣ್ಯರು ಇಸ್ಲಾಮಿನತ್ತ 4

**ಇಸ್ಮಾಈಲ್ ಸಅದಿ ಅಲ್ ಅಫ್ಳಲಿ ಮಾಚಾರ್**

ಬದುಕಿನ ದೀರ್ಘ ಅವಧಿಯಲ್ಲಿ ನನಗೆ ನಷ್ಟವಾಗಿದ್ದ ಮಾನಸಿಕ ಶಾಂತಿಯನ್ನು ನಾನು ಮುಸ್ಲಿಮನಾದಾಗ ಪಡೆದುಕೊಂಡೆ ಎಂದು ಮಾರ್ಟಿನ್ ಆಹ್ಲಾದದಿಂದ ವಿವರಿಸುತ್ತಾರೆ. ಅವರ ಆ ಸಂತಸದ ಮಾತುಗಳು ಹೀಗೆ ಮುಂದುವರಿಯುತ್ತದೆ; "ನಾನು ಈಗ ತಾನೆ ಮನುಷ್ಯನಾದೆ. ಮನುಷ್ಯನ ಪ್ರಕೃತಿಯೊಂದಿಗೆ ಬೆರೆತು ವರ್ತಿಸುವ ಧರ್ಮವೇ ಇಸ್ಲಾಂ." ಮುಖದಲ್ಲಿ ಮಂದಹಾಸ ಬೀರುತ್ತಾ ಮಾರ್ಟಿನ್ ಹೇಳುತ್ತಾರೆ. 'ನಾನು ಮುಸ್ಲಿಮನಾಗಬೇಕೆಂಬುದು ಅಲ್ಲಾಹನ ಇಚ್ಛೆಯಾಗಿತ್ತು. ಆದ್ದರಿಂದ ಅದನ್ನು ತಡೆಯಲು ಯಾರಿಂದಲೂ ಸಾಧ್ಯವಾಗಲಿಲ್ಲ. ನಾನು ಮುಸ್ಲಿಮನಾಗಲಿಕ್ಕಿರುವ ಕಾರಣ ಇದಾಗಿರಬಹುದು.

ಶೈಖ್ ಅಹ್ಮದುಲ್ ಅಲವಿ ಎಂಬವರ ಸನ್ನಿಧಿಯಲ್ಲಿ ಇಸ್ಲಾಂ ಧರ್ಮ ಸ್ವೀಕರಿಸಿದ ಮಾರ್ಟಿನ್ ತನ್ನ ಹೆಸರನ್ನು 'ಅಬೂಬಕರ್ ಸಿರಾಜುದ್ದೀನ್' ಎಂದು ಬದಲಿಸಿಕೊಂಡರು. ಅಬ್ದುಲ್ ವಾಹಿದ್ ಯಹ್ಯ ಎಂಬ ಮಹಾನರೊಬ್ಬರ ಕೃತಿಗಳನ್ನು ಓದಿ ಇಸ್ಲಾಮಿಗೆ ಆಕರ್ಷಿತನಾದ ಮಾರ್ಟಿನ್ ಆ ಮಹಾನರನ್ನು ಹುಡುಕುತ್ತಾ ಈಜಿಪ್ಟ್‌ನತ್ತ ಸಾಗಿದರು. ಅವರಿಂದ ಹಲವು ಜ್ಞಾನಗಳನ್ನು ಕಲಿತ ಮಾರ್ಟಿನ್ ವಿಶೇಷವಾಗಿ ತ್ಯಾಗ ಮನೋಭಾವಗಳನ್ನು ಕಲಿತುಕೊಂಡರು. ತನ್ನ ಗುರು ಉತ್ತಮ ಜ್ಞಾನಿ ಮತ್ತು ಜ್ಞಾನಕ್ಕೆ ತಕ್ಕ ಕರ್ಮವಿದ್ದ ಮಹಾತ್ಮರಾಗಿದ್ದರು ಎಂದು ಮಾರ್ಟಿನ್ ವಿವರಿಸುತ್ತಾರೆ. 'ನೀನು ಇಹದಲ್ಲಿ ಒಬ್ಬ ವಿದೇಶಿಯಂತಿರು ಅಥವಾ ಒಬ್ಬ ಯಾತ್ರಿಕನಂತಿರು " ಎಂಬ ಪ್ರವಾದಿ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಹದೀಸ್‌ನಿಂದ ತಿಳಿದು ಬರುವ ತ್ಯಾಗ (ಝುಹ್‌ದ್)ದ ನಿಜಾರ್ಥವನ್ನು ತಾನು ಗುರುವಿನಿಂದ ತಿಳಿದುಕೊಂಡೆನು ಎಂದು ಹೇಳುವ ಮಾರ್ಟಿನ್, ಇಸ್ಲಾಮಿನ ಬಗ್ಗೆ ಇನ್ನೂ ಹೆಚ್ಚು ಮೆಚ್ಚಿನ ಮಾತುಗಳನ್ನಾಡಿದ್ದಾರೆ. ಒಬ್ಬ ಖ್ಯಾತ ಬ್ರಿಟಿಷ್ ಚಿಂತಕ ಬಹಳಷ್ಟು ಇಸ್ಲಾಮಿಗೆ ಪಾದಾರ್ಪಣೆಗೈದ ನಂತರ, ಉನ್ನತ ಸ್ಥಾನಕ್ಕೆ ತಲುಪಿ ಇಹದ ಎಲ್ಲಾ ಆಡಂಭರಗಳಿಂದಲೂ ಮುಕ್ತನಾಗಿ ವಿನೋದ, ಲಹರಿ, ಮುಂತಾದ ಅಸಂಸ್ಕೃತಿಗಳಿಂದ ಮುಕ್ತಿ ಪಡೆದು, ಜಗದಗಲ ಬೇರೂರುವ ಧರ್ಮ ಇಸ್ಲಾಂ ಎಂದು ತನ್ನ ಆಳವೇರಿದ ವಿಶ್ವಾಸದಿಂದ ಅರಿತುಕೊಂಡರು, ಅಬೂಬಕರ್ ಸಿರಾಜುದ್ದೀನ್. ■

**ಮಯ್ಯಿತ್ ನಮಾಝ್‌ಗೆ ಮನವಿ**

ಪಿಲಾರ್, ಚೆಂಬುಗುಡ್ಡೆ ನಿವಾಸಿ **ಖದೀಜ** (75ವ) ರವರು ಇತ್ತೀಚೆಗೆ ಅಲ್ಲಾಹುವಿನ ಅನುಲ್ಲಂಘನೀಯ ವಿಧಿಗೆ ವಿಧೇಯರಾಗಿರುತ್ತಾರೆ.

*ಅವರ ಮಯ್ಯಿತ್ ನಮಾಝ್ ನಿರ್ವಹಿಸಿ ಮಗ್ಫಿರತ್‌ಗಾಗಿ ಪ್ರಾರ್ಥಿಸಲು ಸರ್ವ ಜಮಾಅತರಲ್ಲಿ ವಿನಂತಿ.*

**ಮಕ್ಕಳು ಹಾಗೂ ಕುಟುಂಬಸ್ಥರು**

# 2 ಬದುಕು ಅವನಿಗಾಗಿ!




ಸುಹಾಪಿತ

ಹಸನುಲ್ ಅನ್ವರ್ ರವರ ಸುಪುತ್ರಿ ನಫೀಸಾ, ಬಾಲ್ಯದಿಂದಲೇ ಉತ್ತಮ ಸಂಸ್ಕಾರ ಮತ್ತು ಶಿಕ್ಷಣದಲ್ಲಿ ಬೆಳೆದರು. ತಂದೆಯೇ ಮೊದಲ ಗುರು. ಫಿಖ್‌ಹ್, ಅಖೀದ, ಅಧ್ಯಾತ್ಮ... ಎಲ್ಲವನ್ನೂ ಕಲಿತರು. ಖುರ್‌ಆನ್ ಕಂಠಪಾಠ ಮಾಡಿದರು. ಖುರ್‌ಆನ್-ಹದೀಸ್‌ಗಳ ಅರ್ಥ -ವ್ಯಾಖ್ಯಾನಗಳನ್ನು ಅರಿತುಕೊಂಡರು. ಕಲಿತುದನ್ನು ಕಲಿಸಿಕೊಡುವುದಕ್ಕೂ, ಅದಕ್ಕಿಂತ ಮುಖ್ಯವಾಗಿ ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೂ ಅತೀ ಹೆಚ್ಚು ಗಮನ ನೀಡಿದರು.

ಬೆಳೆದು ಬರುತ್ತಲೇ ನಫೀಸಾ(رضي الله عنها)ರ ಮುಂದೆ ಮದುವೆಯ ಪ್ರಸ್ತಾಪ ಬಂತು. ನಿಜವಾಗಿ ನಫೀಸಾ(رضي الله عنها)ರಿಗೆ ಮದುವೆಯ ಬಗ್ಗೆ ಆಸಕ್ತಿ ಇರಲಿಲ್ಲ. ಕುಟುಂಬ ಜೀವನ ಆರಾಧನೆಗಳಿಗೆ ಅಡ್ಡಿಯಾದೀತೇ ಎಂಬ ಆತಂಕವಿತ್ತು. ಆದರೆ, ಇಸ್ಲಾಮಿನಲ್ಲಿ ಮದುವೆ ಕೂಡಾ ಪುಣ್ಯ ಕಾರ್ಯ. ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಚರ್ಯೆ. ಮದುವೆಯಾಗದಿರುವುದು ಸರಿಯಲ್ಲವೆಂತಲೇ ನಫೀಸಾ(رضي الله عنها) ಮದುವೆಗೊಪ್ಪಿದರು. ಒಳ್ಳೆಯದೊಂದು ವರ ಕೂಡಿ ಬಂತು. ಇಸ್‌ಹಾಖುಲ್ ಮುಅ್‌ತಮಿನ್. ಅಂತಿಂತಹ ವರನಲ್ಲ. ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಮೊಮ್ಮಗನ ಮೊಮ್ಮಗ ಜಅ್‌ಫರ್ ಸ್ವಾದಿಖ್ ಬಿನ್ ಮುಹಮ್ಮದುಲ್ ಬಾಖಿರ್(رضي الله عنه). ಪ್ರಥಮ ಖಲೀಫಾ ಅಬೂಬಕರ್ ಸಿದ್ದೀಖ್(رضي الله عنه)ರವರ ಮೊಮ್ಮಗ, ಅಂದರೆ ಅಸ್ಮಾ(رضي الله عنها)ರವರ ಮಗ ಖಾಸಿಂ ರವರ ಮಗಳು ಫರ್ಹತ್‌ರವರು ಜಅ್‌ಫರ್(رضي الله عنه)ರವರ ತಾಯಿ. ಅಂತಹ ಕುಟುಂಬ ಹಿನ್ನೆಲೆಯಿರುವ ಜಅ್‌ಫರ್(رضي الله عنه)ರವರ ಐದನೇ ಮಗನೇ ನಫೀಸಾ(رضي الله عنها)ರವರ ವರನಾಗಿ ಬಂದಿರುವ ಇಸ್‌ಹಾಖ್. ಇವರ ಊರು ಈಜಿಪ್ತ್. ಆಗ ಅಲ್ಲಿನ ಹೆಸರು ಮಿಸ್‌ರ್. ಧರ್ಮನಿಷ್ಟ ವ್ಯಕ್ತಿತ್ವದ, ಸದಾ ಆರಾಧನಾ ಮಗ್ನರಾಗಿರುವ ಅಗಾಧ ಧಾರ್ಮಿಕ ಜ್ಞಾನ ಹೊಂದಿದ ಸೂಫೀ ವಿದ್ವಾಂಸ. ಎಲ್ಲಾ ರೀತಿಯಲ್ಲೂ ವಧುವಿಗೆ ತಕ್ಕ ವರ, ವರನಿಗೆ ತಕ್ಕ ವಧು. ಒಬ್ಬರನ್ನೊಬ್ಬರು ಚೆನ್ನಾಗಿ ಅರ್ಥ ಮಾಡಿಕೊಂಡ, ಯಾವತ್ತೂ ಯಾವೊಂದೂ ಜಗಳ ಕಾಣದ ಸುಂದರ ಸಂತೃಪ್ತ ದಾಂಪತ್ಯ ಸಾಗಿತು. ಇಬ್ಬರಿಗೆರಡು ಮಕ್ಕಳು ಜನಿಸಿದವು; ಖಾಸಿಂ ಮತ್ತು ಉಮ್ಮುಕುಲ್ಸೂಂ.

ನಫೀಸಾ(رضي الله عنها) ಸದಾ ಅಧ್ಯಾತ್ಮ ಗುಂಗಿನಲ್ಲೇ ಮುಳುಗುತ್ತಿದ್ದರು. ತನ್ನ ಜೀವನದ ಗುರಿ ಏನು ಎಂಬುದನ್ನು ಯೋಚಿಸತೊಡಗಿದರು. ಅಲ್ಲಾಹು ಮನುಷ್ಯನನ್ನು ಸೃಷ್ಟಿಸಿರುವುದು ಅವನನ್ನು ಆರಾಧಿಸುವುದಕ್ಕಾಗಿ ಮಾತ್ರ ಎಂಬ ಖುರ್‌ಆನ್ ವಚನ ಅವರ ಗಮನ ಸೆಳೆಯಿತು. ಬದುಕನ್ನು ದೇವಾರಾಧನೆಯಲ್ಲೇ ವ್ಯಯಿಸಬೇಕೆಂದು ನಿರ್ಧರಿಸಿದರು. ಅಲ್ಲಾಹನಿಗೆ ಹತ್ತಿರವಾಗಬೇಕಾದರೆ ಕಡ್ಡಾಯ ಕರ್ಮಗಳನ್ನು ಕರಾರುವಾಕ್ಕಾಗಿ ನಿರ್ವಹಿಸಬೇಕು. ಜೊತೆಗೆ, ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಚರ್ಯೆಗಳನ್ನು ಗರಿಷ್ಠ ಪ್ರಮಾಣದಲ್ಲಿ ಪಾಲಿಸಬೇಕು ಎಂಬ ಹದೀಸ್‌ನ ಸಂದೇಶವನ್ನರಿತ ನಫೀಸಾ(رضي الله عنها) ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಚರ್ಯೆಗಳನ್ನು ಚಾಚೂ ತಪ್ಪದಂತೆ ಪಾಲಿಸಲು ಪ್ರಯತ್ನಿಸಿದರು. ಮನಸ್ಸಿನ ತುಂಬ ಅಲ್ಲಾಹನ ಧ್ಯಾನ, ಹೃದಯದಲ್ಲಿಡೀ ಪ್ರವಾದಿ ಪ್ರೇಮ, ದೇಹವಿಡೀ ಆರಾಧನೆಗೆ ಬದ್ಧತೆ - ಇಂತಹ ಬದುಕಿನ ಮೂಲಕ ನಫೀಸಾ ಅಕ್ಷರಶಃ ಔಲಿಯಾಗಳಲ್ಲೊಬ್ಬರಾಗಿ ಬಿಟ್ಟಿದ್ದರು. ಔಲಿಯಾಗಳೆಂದರೆ ಅಲ್ಲಾಹು ಮೆಚ್ಚಿದವರು. ಅಲ್ಲಾಹನಿಗೆ ಹೆಚ್ಚೆಚ್ಚು ಇಬಾದತ್ ಮಾಡಿದವರು ಅಲ್ಲಾಹನಿಗೆ ಮೆಚ್ಚುಗೆಯಾಗುತ್ತಾರೆ. ಅಂತಹವರ ಸಾಲಲ್ಲಿ ಸೇರ್ಪಡೆಯಾದರು ನಫೀಸಾ(رضي الله عنها). ಹಗಲಿಡೀ ಉಪವಾಸ, ರಾತ್ರಿಯಿಡೀ ನಮಾಝ್ ಮಾಡುವುದನ್ನು ಅವರು ರೂಢಿಸಿಕೊಂಡರು!

ತನ್ನ ಕೈಯಲ್ಲಿರುವ ಹಣವನ್ನೆಲ್ಲ ಬಡಬಗ್ಗರಿಗೆ, ರೋಗಿಗಳಿಗೆ, ಕಷ್ಟಕಾರ್ಪಣ್ಯಗಳಲ್ಲಿ ಸಿಲುಕಿದವರಿಗೆ ದಾನ ಮಾಡಿದರು. ತನಗಾಗಿ ಏನನ್ನೂ ಇಟ್ಟುಕೊಳ್ಳದೆ, ತನಗೆ ಯಾರಾದರೂ ಕೊಟ್ಟರೆ ಅದನ್ನೆಲ್ಲ ದಾನ ಮಾಡಿ ಬಿಡುತ್ತಿದ್ದರು.

ನಫೀಸಾ(رضي الله عنها)ರವರಿಗೆ ಬೇಕಿದ್ದುದು ಒಂದೇ; ಅಲ್ಲಾಹನ ಪ್ರೀತಿ. ಅದಕ್ಕಾಗಿ ಯಾವ ಕಷ್ಟವನ್ನೂ ಸಹಿಸಲು ಅವರು ಸಿದ್ಧರಿದ್ದರು. ದೇಹದ ಆಸೆಗಳನ್ನು ಅದುಮಿಟ್ಟರು. ನಾಲಗೆ, ಕಣ್ಣು, ಕಿವಿ, ಕೈ, ಕಾಲುಗಳನ್ನೆಲ್ಲ ಕೆಟ್ಟದ್ದನ್ನು ಹೇಳುವುದರಿಂದ, ನೋಡುವುದರಿಂದ, ಮುಟ್ಟುವುದರಿಂದ, ಕೆಡುಕಿಗೆ ನಡೆಯುವುದರಿಂದ ತಡೆದಿಟ್ಟರು. ಮನಸ್ಸನ್ನು ಕೆಟ್ಟ ಯೋಚನೆಗಳಿಂದ ನಿಯಂತ್ರಿಸಿದರು. ಹೃದಯವನ್ನು ಈಮಾನಿನಿಂದ ಬೆಳಗಿಸಿ, ಬದುಕನ್ನು ಇಸ್ಲಾಮಿನಿಂದ ಅಲಂಕರಿಸಿದರು ನಫೀಸಾ(رضي الله عنها).

"ನಾನು ನಲ್ವತ್ತು ವರ್ಷಗಳ ತನಕ ನನ್ನ ಅತ್ತೆಯ ಸೇವೆ ಮಾಡಿದೆ. ಈ ದೀರ್ಘ ಅವಧಿಯಲ್ಲಿ ಯಾವತ್ತೂ ಅವರು ಒಂದು ರಾತ್ರಿ ಕೂಡಾ ನಿದ್ದೆ ಮಾಡಿದ್ದನ್ನೋ, ಹಗಲು ಉಂಡದ್ದನ್ನೋ ನಾನು ಕಂಡಿಲ್ಲ." ಹೀಗೆಂದವರು ನಫೀಸಾ(رضي الله عنها)ರವರ ಸಹೋದರ ಪುತ್ರಿ ಝೈನಬ್ ಬಿನ್ತ್ ಯಹ್ಯಾ. "ಹೀಗಾದರೆ ಹೇಗೆ? ನಿಮ್ಮ ಶರೀರದೊಂದಿಗೆ ಸ್ವಲ್ಪವಾದರೂ ದಯೆ ತೋರಬಾರದೆ?" ಎಂದು ಕೇಳಿದಾಗ ನಫೀಸಾ(رضي الله عنها) ಏನೆಂದರು ಗೊತ್ತೇ?" ಹೇಗೆ ತಾನೆ ನಾನು ದೇಹಕ್ಕೆ ದಯೆ ತೋರಲು ಸಾಧ್ಯ? ನನ್ನ ಎದುರಿರುವ ಹಾದಿ ಅತ್ಯಂತ ದುರ್ಗಮವಾದುದು. ಜಯಶಾಲಿಗಳಿಗಲ್ಲದೆ ಅದನ್ನು ಹಾದು ಹೋಗಲು ಸಾಧ್ಯವಿಲ್ಲ." ಯಾವ ವಿಷಯ ತೆಗೆದರೂ ಅವರು ಪರಲೋಕ ವಿಜಯದ ಬಗ್ಗೆ ಮಾತ್ರ ಮಾತನಾಡುತ್ತಿದ್ದರು. (ಸಶೇಷ) ■

**ಒಂದೇ ಪ್ರಶ್ನೆ 247**

ಲೋಕಸಭಾಧ್ಯಕ್ಷರಾಗಿದ್ದ ಕನ್ನಡಿಗರೊಬ್ಬರ ಪುತ್ರ ಇಂದು ಭ್ರಷ್ಟಾಚಾರ ವಿರುದ್ಧ ಹೋರಾಟದಲ್ಲಿ ಪ್ರಚಾರ ಪಡೆದಿದ್ದಾರೆ. ಯಾರವರು?

ಉತ್ತರಕ್ಕೆ ಕೊನೇದಿನ 25.8.2011

**ಒಂದೇ ಪ್ರಶ್ನೆ-245ರ ಸರಿಯುತ್ತರ**

ಅಲ್‌ಅನ್ಸಾರ್ ಪತ್ರಿಕೆ ಬಿಡುಗಡೆಯಾದ ದಿನಾಂಕ ಯಾವುದು?

**1991 ಜುಲೈ 28**

ಸರಿಯುತ್ತರಿಸಿದವರು

- ಆಶೂರಾ ಬಾನು 9th ಬ್ಲಾಕ್ ಕಾಟಿಪಳ್ಳ

## ಎಸ್ಸೆಸ್ಸೆಫ್ ದಾವಣಗೆರೆ

ದಾವಣಗೆರೆ: ಕರ್ನಾಟಕ ರಾಜ್ಯ ಸುನ್ನೀ ಸ್ಟೂಡೆಂಟ್ಸ್ ಫೆಡರೇಶನ್ ದಾವಣಗೆರೆ ವಲಯ ಸಮಿತಿಯನ್ನು ರೂಪಿಸಲಾಯಿತು. ಸಯ್ಯಿದ್ ಮುಖ್ತಿಯಾರ್ ಹರ್ಪುತ್ ದಾವಣಗೆರೆ ಅಧ್ಯಕ್ಷತೆಯಲ್ಲಿ ರಾಜ್ಯ ಉಪಾಧ್ಯಕ್ಷ ಕೆ.ಎಂ. ಅಬೂಬಕರ್ ಸಿದ್ದೀಖ್ ಉದ್ಘಾಟಿಸಿದರು. ಸಯ್ಯಿದ್ ಸಿಟಿಎಂ ಉಮರ್ ಅಸ್ಸಖಾಫ್ ತಂಙಳ್ ದುಆ ನಡೆಸಿದರು. ಯೂಸುಫ್ ರಝಾ ಅಮ್ಜದಿ ಮಾತನಾಡಿದರು. ರಫೀಖ್ ಸಖಾಫಿ ಹಡಗಲಿ ಮೊದಲಾದವರು ಉಪಸ್ಥಿತರಿದ್ದರು. ಮುಸ್ತಫಾ ನಈಮಿ ಸ್ವಾಗತಿಸಿ, ಅಬ್ದುರ್ರಹ್ಮಾನ್ ಬಾವಾ ಧನ್ಯವಾದವಿತ್ತರು.

ಸಮಿತಿ ಅಧ್ಯಕ್ಷರಾಗಿ ನಯಾಝ್ ಖಾನ್ ರಝ್ವಿ, ಪ್ರ.ಕಾರ್ಯದರ್ಶಿಯಾಗಿ ಅಬ್ದುರ್ರಹ್ಮಾನ್ ಬಾವಾ, ಸಂಘಟನಾ ಕಾರ್ಯದರ್ಶಿಯಾಗಿ ಮುಹಮ್ಮದ್ ಇಮ್ರಾನ್ ರಝಾ ಹಾಗೂ ಕೋಶಾಧಿಕಾರಿಯಾಗಿ ಜಿ.ಎಚ್. ಬುತ್ತಿ ಗೌಸ್‌ರವರನ್ನು ಆರಿಸಲಾಯಿತು.

ಇತರ ಪದಾಧಿಕಾರಿಗಳು: ಯೂಸುಫ್ ರಝಾ ಅಮ್ಜದಿ, ಮುಹಮ್ಮದ್ ಶಬೀರ್ ಸಾಬ್, ಎಂ.ರಫೀಖ್, ಮುಹಮ್ಮದ್ ಬಾಶಾ ನೂರಾನಿ (ಉಪಾಧ್ಯಕ್ಷರು), ಮುಹಮ್ಮದ್ ಝಬೀಉಲ್ಲಾ, ಅಹ್ಮದ್ ರಝಾ, ಮುಹಮ್ಮದ್ ಇಕ್ಬಾಲ್ ವಿಎಂ, ನೂರ್ ಮುಹಮ್ಮದ್ ಅರಬ್ (ಜತೆ ಕಾರ್ಯದರ್ಶಿಗಳು), ಸಯ್ಯಿದ್ ಮುಖ್ತಿಯಾರ್ ಹರ್ಪುತ್, ಅತೀಖ್ ಹರ್ಪುತ್, ಖಾದರ್ ಬಾಶಾ, ಇಮ್ರಾನ್ ಎಸ್.ಎಚ್, ಮುಹಮ್ಮದ್ ಅಶ್ರಫ್ ರಝಾ, ಮುಹಮ್ಮದ್ ರಫೀಖ್, ಸಾಜಿದ್ ಅಹ್ಮದ್ ರಝಾ, ಮುಸ್ತಫಾ ರಝಾ ನಈಮಿ (ಸದಸ್ಯರು).

## ಧಾರ್ಮಿಕ ಉಪನ್ಯಾಸ

ಪುತ್ತೂರು: ಈಶ್ವರ ಮಂಗಳ ಸೆಕ್ಟರ್ ಎಸ್ಸೆಸ್ಸೆಫ್ ವತಿಯಿಂದ ನಡೆದ ಧಾರ್ಮಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ಎಸ್‌ವೈಎಸ್ ರಾಜ್ಯ ಕಾರ್ಯದರ್ಶಿ ಜಿ.ಎಂ.ಎಂ.ಕಾಮಿಲ್ ಸಖಾಫಿ ಮುಖ್ಯಭಾಷಣ ಮಾಡಿದರು. ಸ್ವಲಾಹುದ್ದೀನ್ ಸಖಾಫಿ ಉದ್ಘಾಟಿಸಿದರು. ಅಝೀಝ್ ಮಿಸ್ಬಾಹಿ ಸ್ವಾಗತಿಸಿ, ಹಂಝ ಮುಸ್ಲಿಯಾರ್ ಧನ್ಯವಾದವಿತ್ತರು.

## ಮಯ್ಯಿತ್ ನಮಾಝ್

ನಾರ್ವೆ ಮೊಯ್ದಿನ್ ಹಾಜಿ ಜೋಕಟ್ಟೆ
ಸಾರಮ್ಮ ಬ್ಯಾಂಕೆಕೊಪ್ಪಳ, ಸಜೀಪ
ಆಯಿಶಾ ಕೊಳಂಬೆ
ಹಲೀಮಾ ನಿಡಿಗಲ್
ಹಲೀಮಮ್ಮ ಬಾಕ್ರವಳ್ಳಿ
ಫಾತಿಮ ಕಡ್ಲೆಮಕ್ಕಿ
ಮರ್ಯಮ್ ಕಕ್ಕೆಪದವು
ಆಇಶಾ ಪುರುಷಂಗೋಡಿ
ಮರ್ಯಂ ಕನ್ಯಾರಕೋಡಿ
ಇಬ್ರಾಹಿಂ ಕುಪ್ಪೆಟ್ಟಿ
ಖಲಂದರ್ ಪಡುಬಿದ್ರಿ
ಹುಸೈನ್ ಕಾಬೆಟ್ಟು
ಅಬ್ದುರ್ರಹ್ಮಾನ್ ಪಟ್ಟೋರಿ
ಅಹ್ಮದ್ ಮೂಳೂರು
ಅಹ್ಮದ್ ರಝಾಖ್ ಉಪ್ಪಿನಂಗಡಿ
ಸಲ್ಮಾ ಕಾಸರಗೋಡು




## ಯುಎಇ-ಕರ್ನಾಟಕ ಎಸ್. ವೈ.ಎಸ್.ಅಜ್ಮಾನ್

ಅಜ್ಮಾನ್: ಕರ್ನಾಟಕ ಸುನ್ನೀ ಯುವಜನ ಸಂಘ ಅಜ್ಮಾನ್ ಘಟಕವನ್ನು ಇತ್ತೀಚೆಗೆ ಕರಾಮ ಸುನ್ನೀ ಸೆಂಟರ್ ಆಡಿಟೋರಿಯಂನಲ್ಲಿ ನಡೆದ ಸಭೆಯಲ್ಲಿ ರೂಪೀಕರಿಸಲಾಯಿತು.

ಸಮಾರಂಭವನ್ನು ಉದ್ಘಾಟಿಸಿದರು ಮೆಹಬೂಬ್ ಸಖಾಫಿ ಕಿನ್ಯ ಅಧ್ಯಕ್ಷತೆಯನ್ನು ಎಸ್ಸೆಸ್ಸೆಫ್ ಕರ್ನಾಟಕ ರಾಜ್ಯ ಉಪಾಧ್ಯಕ್ಷ ಹಫೀಳ್ ಸಅದಿ ಮಡಿಕೇರಿ ವಹಿಸಿದ್ದರು. ಮಾತನಾಡಿದ ಯಸ್.ವೈ.ಎಸ್. ದುಬೈ ಸಮಿತಿ ಪ್ರಧಾನ ಕಾರ್ಯದರ್ಶಿ ಕೆ.ಯಂ.ಇಕ್ಬಾಲ್ ಕಾಜೂರು ಆಯ್ಕೆ ಪ್ರಕ್ರಿಯೆಗೆ ನೇತೃತ್ವ ನೀಡಿದರು.

ಈ ಕೆಳಗಿನಂತೆ ಹೊಸ ಸಮಿತಿಯನ್ನು ರೂಪೀಕರಿಸಲಾಯಿತು. ಅಧ್ಯಕ್ಷರು: ಅಬ್ದುಲ್ ಖಾದರ್ ಸಅದಿ ಸುಳ್ಯ, ಉಪಾಧ್ಯಕ್ಷರಾಗಿ ಮುಸ್ತಫಾ ಎಡಪಾಲ್ ಕೊಡಗು ಮತ್ತು ಹಂಝ ಅಲ್ ಅಮಾನಿ ಉಪ್ಪಿನಂಗಡಿ, ಪ್ರಧಾನ ಕಾರ್ಯದರ್ಶಿ: ಮುಹಮ್ಮದ್ ಜಮಾಲ್ ಯೂಸುಫ್ ಮೂಡಬಿದ್ರಿ, ಜೊತೆ ಕಾರ್ಯದರ್ಶಿ: ತಾಜುದ್ದೀನ್ ಉಳ್ಳಾಲ, ಸಂಘಟನಾ ಕಾರ್ಯದರ್ಶಿಗಳಾಗಿ ಅಬ್ದುಲ್ ತಯ್ಯಿಬ್ ಪುಂಜಾಲಕಟ್ಟೆ, ಅಬ್ದುರ್ರಹ್ಮಾನ್ ಮುಸ್ಲಿಯಾರ್ ಮುಡಿಪು, ಸದಸ್ಯರುಗಳು: ಅಶ್ರಫ್ ವೇಣೂರು, ಮುಹಮ್ಮದ್ ಶಾಫಿ, ಸುಲೈಮಾನ್ ಪುತ್ತೂರು, ನೂರ್ ಮುಹಮ್ಮದ್, ಅಬ್ದುಲ್ ಹಮೀದ್, ಅಬ್ದುಲ್ ಖಾದಿರ್, ಎಸ್.ಎಂ. ನಝೀರ್, ಮುಹಮ್ಮದ್ ಇದ್‌ರೀಸ್, ಉಮರ್ ಫಾರೂಖ್ ಮತ್ತು ಅಬ್ದುಲ್ ಖಾದಿರ್ ಅಬ್ದುಲ್ ಖಾದಿರ್ ಸಅದಿ ಸುಳ್ಯ ಸ್ವಾಗತಿಸಿ, ತಯ್ಯಿಬ್ ಪುಂಜಾಲಕಟ್ಟೆ ಧನ್ಯವಾದವಿತ್ತರು.

## ಎಸ್ಸೆಸ್ಸೆಫ್ ಇನೋಳಿ

ಕೊಣಾಜೆ: ಇನೋಳಿ ಶಾಖಾ ಎಸ್ಸೆಸ್ಸೆಫ್ ವತಿಯಿಂದ 'ಮರ್‌ಹಬಾ ಶಹ್‌ರ ರಮಳಾನ್' ಕಾರ್ಯಕ್ರಮದ ಅಂಗವಾಗಿ ಪುರುಷರು ಮತ್ತು ಸ್ತ್ರೀಯರಿಗೆ ಪ್ರತ್ಯೇಕ ಉಪನ್ಯಾಸ ನೀಡಲಾಯಿತು. ರಾಜ್ಯ ಉಪಾಧ್ಯಕ್ಷ ಕೆ.ಎಂ.ಅಬೂಬಕರ್ ಸಿದ್ದೀಖ್ ಉಪನ್ಯಾಸ ನೀಡಿದರು.

90ಕ್ಕೂ ಹೆಚ್ಚು ಬಡ ಕುಟುಂಬಗಳಿಗೆ ಕಿಟ್ ವಿತರಿಸಲಾಯಿತು. ಇತ್ತೀಚೆಗೆ ಮೃತರಾದ ಉಮರಬ್ಬ ಮೈಕೋಡಿ ಹಾಗೂ ಮುಸ್ತಫಾ ಪುರ್ ಸೋಟರವರಿಗೆ ತಹ್ಲೀಲ್ ಅರ್ಪಿಸಲಾಯಿತು. ನಾಯಕರಾದ ಉಮರ್ ಅಹ್ಸನಿ, ಹೈದರ್ ಸಖಾಫಿ, ಫಾರೂಖ್ ಸಖಾಫಿ, ಅಲ್ತಾಫ್ ಪಾಳಿಲಿ ಮತ್ತಿತರರು ಉಪಸ್ಥಿತರಿದ್ದರು. ಕಾರ್ಯದರ್ಶಿ ಸಿದ್ದೀಖ್ ಸ್ವಾಗತಿಸಿದರು.

## ದೇರಳಕಟ್ಟೆ ಕ್ಯಾಂಪಸ್ ಕ್ಲಾಸ್

ದೇರಳಕಟ್ಟೆ: ಎಸ್ಸೆಸ್ಸೆಫ್ ಕ್ಯಾಂಪಸ್ ಯುನಿಟ್ ವತಿಯಿಂದ 'ರಮಳಾನ್ ಖುರ್‌ಆನ್‌ಗಳ ವೈಜ್ಞಾನಿಕತೆ' ಎಂಬ ಬಗ್ಗೆ ಉಪನ್ಯಾಸ ನಡೆಯಿತು. ಪ್ರೊ. ಎಸ್. ಅಬ್ದುರ್ರಹ್ಮಾನ್ ಇಂಜಿನಿಯರ್ ತರಗತಿ ನಡೆಸಿದರು. ಸೆಕ್ಟರ್ ಅಧ್ಯಕ್ಷ ಫಾರೂಖ್ ಸಖಾಫಿ ಅಧ್ಯಕ್ಷತೆಯಲ್ಲಿ ಜಿಲ್ಲಾಧ್ಯಕ್ಷ ಇಸ್ಹಾಖ್ ಝುಹ್ರಿ ಉದ್ಘಾಟಿಸಿದರು. ಹಂಝ ಸ್ವಾಗತಿಸಿ, ಉಬೈದ್ ಧನ್ಯವಾದವಿತ್ತರು.

## ಹೊಸ ಪುಸ್ತಕಗಳು


ಬೆಲೆ ರೂ.25.00


ಬೆಲೆ ರೂ.25.00



ಬೆಲೆ ರೂ.20.00


ಬೆಲೆ ರೂ.20.00

M.O. ಕಳಿಸಿರಿ

ಸಮರಾತ್ ಬುಕ್ಸ್, ಅಲ್‌ಅನ್ಸಾರ್ ಕಾರ್ಯಾಲಯ, ಕುತ್ತಾರ್, ಮಂಗಳೂರು-17. Ph:0824-2467886, Cell: 9480075704

# ಈದುಲ್ ಫಿತ್ವ್‌ರ್

←1ನೇ ಪುಟದಿಂದ

### ಫಿತ್ವ್‌ರ್ ಝಕಾತ್

ಈದ್‌ನ ರಾತ್ರಿ ಮತ್ತು ಹಗಲಿಗೆ, ತನಗೆ ಮತ್ತು ತನ್ನ ಆಶ್ರಿತರಿಗೆ ಅಗತ್ಯವಾದ ಮನೆ ಖರ್ಚು, ವಸ್ತ್ರಗಳ ಖರ್ಚಿಗೆ ಬೇಕಾದಷ್ಟು ಇದ್ದು, ಇನ್ನೂ ಸಂಪತ್ತು ಉಳಿದಿರುವವರು ಫಿತ್‌ರ್ ಝಕಾತ್ ಕೊಡಬೇಕಾದುದು ಕಡ್ಡಾಯ.

ಈದ್‌ನ ಚಂದ್ರೋದಯದಿಂದಲೇ ಝಕಾತ್ ನೀಡುವ ಸಮಯ ಆರಂಭ. ಈದ್ ನಮಾಝನ್ನು ಇಮಾಂ ಆರಂಭಿಸುವುದಕ್ಕಿಂತ ಮುನ್ನ ಕೊಡುವುದು ಸುನ್ನತ್. ಈದ್ ನಮಾಝ್‌ನ ನಂತರಕ್ಕೆ ಮುಂದೂಡುವುದು ಕರಾಹತ್. ಈದ್‌ನ ಸೂರ್ಯಾಸ್ತದವರೆಗೂ ಕೊಡದಿರುವುದು ಹರಾಂ. ಹಾಗೇ ಮಾಡಿದ್ದಲ್ಲಿ ತಕ್ಷಣ ಸಂದಾಯ ಮಾಡುವುದು ಕಡ್ಡಾಯ. (ಫಿತ್ವ್‌ರ್ ಝಕಾತ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಇದೇ ಸಂಚಿಕೆಯ 6,7ನೇ ಪುಟ ನೋಡಿ)

ರಮಳಾನಿನ ಸತ್ಕರ್ಮಗಳು ಭೂಮ್ಯಾಕಾಶಗಳ ನಡುವೆ ಉಳಿಯುತ್ತವೆ. ಫಿತ್ವ್‌ರ್ ಝಕಾತ್ ಕೊಟ್ಟಾಗಲೇ ಅದು ಅಲ್ಲಾಹನನ್ನು ತಲುಪುವುದು ಎಂಬುದಾಗಿ ಹದೀಸ್‌ನಲ್ಲಿದೆ.

### ತಕ್ಬೀರ್

ಈದ್ ದಿನದ ಅತ್ಯಂತ ಮುಖ್ಯ ದ್ಸಿಕ್‌ರ್ ತಕ್ಬೀರ್. ಅಂದು ಖುರ್‌ಆನ್ ಪಾರಾಯಣವೂ ಸೇರಿ ಇತರೆಲ್ಲ ದ್ಸಿಕ್ರ್‌ಗಳಿಗಿಂತ ತಕ್ಬೀರ್ ಹೇಳುವುದಕ್ಕೇ ಹೆಚ್ಚು ಮಹತ್ವ.

ಈದುಲ್ ಫಿತ್ವ್‌ರ್‌ನ ಚಂದ್ರೋದಯದಿಂದ ಈದ್ ನಮಾಝ್‌ಗೆ ಕೈ ಕಟ್ಟುವವರೆಗೆ ನಿರಂತರವಾಗಿ ತಕ್ಬೀರ್ ಹೇಳುತ್ತಿರಬೇಕು. ಧ್ವನಿಯೆತ್ತಿಯೇ ತಕ್ಬೀರ್ ಹೇಳುತ್ತಿರಬೇಕು. ಸ್ತ್ರೀಯು ಅನ್ಯಪುರುಷರಿಗೆ ಕೇಳಿಸುವಂತಿದ್ದರೆ ಧ್ವನಿಯೆತ್ತಬಾರದು.

### ಸ್ನಾನ,ವಸ್ತ್ರ, ಸುಗಂಧ

ಈದ್‌ನಂದು ಸ್ನಾನ ಮಾಡುವುದು ಪ್ರತ್ಯೇಕ ಸುನ್ನತ್. ಮಕ್ಕಳು, ಮಹಿಳೆಯರು ಸೇರಿ ಎಲ್ಲರಿಗೂ ಸುನ್ನತ್. ಈದ್‌ನಮಾಝ್ ಮಾಡದವರೂ ಸ್ನಾನ ಮಾಡಬೇಕು. ಈದ್‌ನ ಮಧ್ಯರಾತ್ರಿಯಿಂದ ಸ್ನಾನದ ಸಮಯ ಶುರು. ನಮಾಝ್‌ಗಿಂತ ಮುನ್ನ ಉತ್ತಮ. ಈದ್‌ನ ಸಂಜೆಯೊಳಗೆ ಮಾಡಬೇಕು. ಜುಮುಅಕ್ಕೆ ಸಿದ್ಧವಾಗುವಂತೆ ಕೂದಲು, ಉಗುರುಗಳನ್ನೂ ಕತ್ತರಿಸಿ ಒಪ್ಪ ಮಾಡುವುದು ಸುನ್ನತ್. ನಮಾಝಿಗೆ ಹೋಗದವರಿಗೂ ಇದು ಅನ್ವಯ. ಈದ್‌ನ ದಿನ ಸಾಧ್ಯವಿರುವ ರೀತಿಯಲ್ಲಿ ಉತ್ತಮ ಹೊಸ ವಸ್ತ್ರ ತೊಡುವುದು ಸುನ್ನತ್. ಇದು ಎಲ್ಲರಿಗೂ ಅನ್ವಯ.

ಸುಗಂಧ ಹಚ್ಚುವುದು ಕೂಡಾ ಸುನ್ನತ್. ಆದರೆ ಸ್ತ್ರೀಯರು ಪರಪುರುಷರು ಆಕರ್ಷಿಸುವಂತೆ ಸುಗಂಧ ಬಳಸುವುದು ಯಾವತ್ತೇ ಆದರೂ ಹರಾಂ.

### ನಮಾಝ್

ಈದ್‌ನ ಅತ್ಯಂತ ಮುಖ್ಯ ಆರಾಧನೆ ಎರಡು ರಕ್‌ಅತ್ ಈದ್ ನಮಾಝ್. ಪುರುಷರು ಮಸೀದಿಗೆ ತೆರಳಿ ಸಾಮೂಹಿಕವಾಗಿ ನಿರ್ವಹಿಸಬೇಕು. ಮಿಂದು ಶುಚಿಯಾಗಿ, ಶುಭ್ರವಸ್ತ್ರಧಾರಿಗಳಾಗಿ ಬೆಳಿಗ್ಗೆ ಬಹುಬೇಗನೆ ಹೋಗುವುದು ಕೂಡಾ ಸುನ್ನತ್.

ಈದುಲ್ ಫಿತ್ವ್‌ರಿನಂದು ಈದ್ ನಮಾಝ್‌ಗಾಗಿ ಮಸೀದಿಗೆ ತೆರಳುವ ಸತ್ಯವಿಶ್ವಾಸಿಗಳನ್ನು ಮಲಕುಗಳು ರಸ್ತೆಬದಿಗಳಲ್ಲಿ ನಿಂತು ಕರೆದು ಹೇಳುವರು; ಮುಸ್ಲಿಮರ ತಂಡವೇ! ನೀವು ಉದಾತ್ತನಾದ ಅಲ್ಲಾಹನತ್ತ ತೆರಳಿರಿ. ನಿಮಗವನು ಒಳಿತನ್ನು ಅನುಗ್ರಹಿಸುವನು. ನಿಮಗೆ ತುಂಬಾ ಪುಣ್ಯ ನೀಡುವನು. ನಿಮ್ಮಲ್ಲಿ ರಾತ್ರಿಯ ನಮಾಝನ್ನು ನಿರ್ದೇಶಿಸಲಾಯಿತು. ನೀವದನ್ನು ನಿರ್ವಹಿಸಿದಿರಿ. ಹಗಲು ಉಪವಾಸವಿರುವಂತೆ ಆದೇಶಿಸಲಾಯಿತು. ನೀವದನ್ನು ಪಾಲಿಸಿದಿರಿ. ನಿಮ್ಮ ಒಡೆಯನನ್ನು ಅನುಸರಿಸಿದಿರಿ. ನಿಮಗೆ ಅಲ್ಲಾಹು ನೀಡುವ

(ಕೊನೇ ಪುಟಕ್ಕೆ)


ಅಲ್ ಅನ್ಸಾರ್ ಚಂದಾ ವಿವರ: ವಾರ್ಷಿಕ ಚಂದಾ: ರೂ. 300-00, ಅರ್ಧ ವಾರ್ಷಿಕ: ರೂ. 160-00 *ಗಲ್ಫ್ ರಾಷ್ಟ್ರಗಳಿಗೆ* ವಾರ್ಷಿಕ : ರೂ. 1800-00, ಅರ್ಧ ವಾರ್ಷಿಕ : ರೂ. 900-00. *ಫಾರಿನ್ ಗಿಫ್ಟ್* : ರೂ. 500-00

## ತೌಫೀಕ್ ಗ್ರೈಂಡರ್ಸ್

ಕ್ರಾಮ್ಟನ್ ಮೋಟರ್ ಅಳವಡಿಸುವುದರೊಂದಿಗೆ



ತಯಾರಕರು:

**ತೌಫೀಕ್ ಇಂಡಸ್ಟ್ರೀಸ್**

ಆಲಡ್ಕ, ಪಾಣೆಮಂಗಳೂರು.

ಫೋನ್: 280019(O), 320819(O), 280219(R)

ಮೊಬೈಲ್: 9945190219



ಹಾಲ್‌ಮಾರ್ಕ್ ಪ್ರಾಮಾಣೀಕೃತ ಚಿನ್ನಾಭರಣ, ಐಜಿಐ ವಜ್ರಾಭರಣಗಳು

ನಿಮ್ಮ ಮನೋಭಿಲಾಷೆಯನ್ನು ಪೂರೈಸುವುದು ಖಚಿತ

● ಮದುವೆ ಖರೀದಿಗೆ ವಿಶೇಷ ರಿಯಾಯಿತಿ ● ಹಳೇ ಚಿನ್ನಕ್ಕೆ ಅತ್ಯುತ್ತಮ ಮೌಲ್ಯ



ಇಂದೇ ಭೇಟಿ ನೀಡಿ.

ಆಕರ್ಷಣ್ ಗೋಲ್ಡ್

ಶುದ್ಧತೆ ಹಾಗೂ ವಿನ್ಯಾಸಗಳ ಸಮ್ಮಿಲನ

ಮಸೀದಿ ರಸ್ತೆ, ಉಡುಪಿ

☎ : 0820-2529316 / 9845125488



RNI No: KARKAN/2009/28984 Regd No.: KA/SK/MNG/ 982/ 2009-11

Licensed to Post without prepayment License No. WPP-SK-12

Posted at : RMS MANGALORE, On 22-8-2011 (Monday)

If Undelivered Please Return : Al-Alnsar, Kuthar, Mangalore-575 017

E-mail : alansar.weekly@yahoo.com

ಚಂದಾ ನಂಬ್ರ :

To, ..............................................................................

..............................................................................

..............................................................................

..............................................................................

..............................................................................


←11ನೇ ಪುಟದಿಂದ

ಉಡುಗೊರೆಗಳನ್ನು ಹಿಡಿಯಿರಿ.

ನಮಾಝ್ ಮುಗಿದ ಬಳಿಕ ಒಬ್ಬರು ಮಲಕ್ ಹೇಳುವರು; ತಿಳಿಯಿರಿ! ನಿಮ್ಮ ಪ್ರಭುವು ನಿಮಗೆ ಕ್ಷಮಿಸಿರುವನು. ನೀವು ಒಳ್ಳೆಯವರಾಗಿ ನಿಮ್ಮ ಮನೆಗೆ ಮರಳಿರಿ. ಆಕಾಶದಲ್ಲಿ ಅಲ್ಲಾಹನ ಬಳಿ ಈ ದಿನಕ್ಕೆ 'ಉಡುಗೊರೆಯ ದಿನ' ಎಂದೇ ಹೆಸರು.

ಔಸ್ ಅಲ್‌ಅನ್ಸಾರಿ ﷺ ಯವರಿಂದ ತ್ವಬ್‌ರಾನೀ ಉಲ್ಲೇಖಿಸಿದ ಹದೀಸ್ ಇದು.

ಮಸೀದಿಗೆ ಒಂದು ದಾರಿಯಲ್ಲಿ ಹೋಗಿ ಇನ್ನೊಂದು ದಾರಿಯಲ್ಲಿ ಮರಳುವುದು ಹಾಗೂ ದೂರದ ದಾರಿಯಲ್ಲಿ ಹೋಗುವುದು ಮತ್ತು ಹತ್ತಿರದ ದಾರಿಯಲ್ಲಿ ಮರಳುವುದು ಸುನ್ನತ್. ಇದರಿಂದ ಎರಡೂ ದಾರಿಗಳಲ್ಲಿರುವ ಮಲಕ್‌ಗಳ ದಾಖಲಾತಿಗೆ ಸೇರಬಹುದು. ಎರಡು ದಾರಿಗಳಲ್ಲಿ ಸಿಗುವ ಕುಟುಂಬಿಕರ ಮನೆಗಳನ್ನು ಸಂದರ್ಶಿಸಿ ಶುಭಾಶಯ ವಿನಿಮಯ ಮಾಡಬಹುದು. ಮಸೀದಿಗೆ ಹೋಗುವುದು ಆರಾಧನೆಗಾಗಿರುವುದರಿಂದ ಒಂದೊಂದು ಹೆಜ್ಜೆಗೂ ಪುಣ್ಯ ಸಿಗುತ್ತದೆ. ದೂರದ ದಾರಿಯಲ್ಲಿ ನಡೆಯುವ ಮೂಲಕ ಹೆಚ್ಚೆಚ್ಚು ಪುಣ್ಯ ಸಂಪಾದಿಸಬಹುದು.

# ಈದುಲ್ ಫಿತ್ವ್‌ರ್

ಈದ್ ನಮಾಝ್‌ನ ಸಮಯವು ಸೂರ್ಯೋದಯವಾದಾಗಲೇ ಆರಂಭವಾಗುತ್ತದೆ. ಸೂರ್ಯೋದಯವಾಗಿ ಸುಮಾರು ಅರ್ಧಗಂಟೆ ವಿಳಂಬವಾಗುವುದು ಸುನ್ನತ್. ಈದ್ ನಮಾಝಿನ ಕ್ರಮ ಇತರ ಸಾಮಾನ್ಯ ನಮಾಝ್‌ಗಳಂತೆಯೆ. ಮೊದಲ ರಕ್‌ಅತ್‌ನಲ್ಲಿ ಏಳು ಮತ್ತು ಎರಡನೇ ರಕ್‌ಅತ್‌ನಲ್ಲಿ ಐದು ತಕ್ಬೀರ್‌ಗಳನ್ನು ಹೇಳುವುದಕ್ಕಿದೆ. ಈ ತಕ್ಬೀರ್‌ಗಳನ್ನು ಇಮಾಮರಂತೆ ಮಅ್‌ಮೂಮ್‌ಗಳು ಕೂಡಾ ಜೋರಾಗಿಯೇ ಹೇಳಬೇಕು.

ಈದ್‌ನ ನಮಾಝ್ ಪುರುಷರಂತೆ ಸ್ತ್ರೀಯರಿಗೂ ಸುನ್ನತ್. ಈದ್ ನಮಾಝಿಗೆ ಜಮಾಅತ್ ಸುನ್ನತ್ ಆಗಿದ್ದು, ಒಂಟಿಯಾಗಿ ನಿರ್ವಹಿಸಿದರೂ ಸರಿಯೆ. ಮಹಿಳೆಯರು ಮನೆಯಲ್ಲೇ ಮನೆಯ ಇತರ ಮಹಿಳೆಯರೊಂದಿಗೆ ಸೇರಿಕೊಂಡು ಜಮಾಅತ್ ಆಗಿ ಅಥವಾ ಒಂಟಿಯಾಗಿಯಾದರೂ ನಿರ್ವಹಿಸಬೇಕು. ನಮಾಝ್‌ಗಾಗಿ ಒಗ್ಗೂಡಲು ಸಾರ್ವಜನಿಕ ಮಸೀದಿಗೋ, ಮೈದಾನಕ್ಕೋ, ಹೋಗುವುದು ಸಲ್ಲದು.

## ಖುತ್‌ಬಾ

ಪುರುಷರಿಗೆ ಈದ್ ನಮಾಝ್‌ನ ಬಳಿಕ ಎರಡು ಖುತ್‌ಬಾಗಳು ಸುನ್ನತ್. ಕೇವಲ ನಮಾಝ್ ಮಾತ್ರ ನಿರ್ವಹಿಸಿ ಖುತ್‌ಬಾದಲ್ಲಿ ಸೇರದೆ ಬರುವುದು ಅಪೂರ್ಣತೆಯಾಗಿದೆ.

ಎರಡು ಖುತ್‌ಬಾಗಳ ಆರಂಭದಲ್ಲಿ ಕ್ರಮವಾಗಿ 9ಮತ್ತು 7ತಕ್ಬೀರ್‌ಗಳನ್ನು ಹೇಳಬೇಕು. ಇವುಗಳನ್ನು ಒಟ್ಟಾಗಿ ಹೇಳದೆ ಬಿಡಿಸಿ ಬಿಡಿಸಿ ಹೇಳಬೇಕು. ಅಲ್ಲಾಹು ಅಕ್ಬರುಲ್ಲಾಹು ಅಕ್‌ಬರುಲ್ಲಾಹು... ಎನ್ನುವುದಲ್ಲ. ಅಲ್ಲಾಹು ಅಕ್ಬರ್ ಅಲ್ಲಾಹು ಅಕ್ಬರ್ ಎಂದು ಪ್ರತ್ಯ ಪ್ರತ್ಯೇಕವಾಗಿ ಹೇಳಬೇಕು.

## ಸ್ನೇಹ ವಿನಿಮಯ

ಈದ್ ಸಂತೋಷಾಚರಣೆಗೆ ಇರುವುದು. ಅಂದು ಪರಸ್ಪರ ಸ್ನೇಹ ವಿನಿಮಯ ನಡೆಸುವುದು, ಕುಟುಂಬ ಸಂಬಂಧಿಕರನ್ನು ಸಂದರ್ಶಿಸುವುದು, ಮುಖತಃ, ಪತ್ರ ಇಲ್ಲವೇ ಫೋನ್, ಗ್ರೀಟಿಂಗ್‌ಕಾರ್ಡ್ ಮೂಲಕ ಈದ್ ಶುಭಾಶಯ ಸಲ್ಲಿಸುವುದು ಇತ್ಯಾದಿಗಳನ್ನು ಮಾಡುವಾಗ ಇದೊಂದು ಸುನ್ನತ್ ಆದ ಸಂಗತಿಯೆಂಬ ನಿಯ್ಯತ್‌ನಿಂದಲೇ ಮಾಡಬೇಕು. ಆಗ ಪುಣ್ಯ ಸಿಗುತ್ತದೆ.

ಸ್ನೇಹ ವಿನಿಮಯದ ಹೆಸರಲ್ಲಿ ಅನ್ಯ ಸ್ತ್ರೀಪುರುಷರು, ಸಂಬಂಧಿಕರೇ ಆಗಿದ್ದರೂ ಪರಸ್ಪರ ಹಸ್ತಲಾಘವ ನೀಡುವುದು, ಧರ್ಮದ ಮೇರೆ ಮೀರಿ ಬೆರೆಯುವುದು ಇತ್ಯಾದಿಗಳು ಯಾವಾಗಲೂ ನಿಷಿದ್ಧವೆ.

ಹಬ್ಬದ ಹೆಸರಿನಲ್ಲಿ ಧರ್ಮದ ಮಿತಿ ದಾಟಿದ ಯಾವ ಆಚಾರವೂ ಸಮ್ಮತಾರ್ಹವಲ್ಲ. ಪವಿತ್ರ ರಮಳಾನಿನಲ್ಲಿ ಸತ್ಕರ್ಮಗಳು ನಿರ್ವಹಿಸಿ ಗಳಿಸಿಕೊಂಡ ಆತ್ಮಶುದ್ಧಿಯನ್ನು ರಮಳಾನಿನ ಮರುದಿನವೇ ಗಾಳಿಗೆ ಹರಡುವುದು ಅವಿವೇಕವಲ್ಲವೆ? ■


## ಅಭಿನಂದನೆಗಳು

ಜಿಲ್ಲೆಯ ಪ್ರತಿಷ್ಠಿತ ವಾಣಿಜ್ಯೋದ್ಯಮಿಗಳ ಸಂಘ ಕೆನರಾ ಚೇಂಬರ್ ಆಫ್ ಕಾಮರ್ಸ್ & ಇಂಡಸ್ಟ್ರೀಸ್ (KCCI) ಇದರ ಉಪಾಧ್ಯಕ್ಷರಾಗಿ ಯುವ ಉದ್ಯಮಿ, ಹಸನ್ ಹಾಜಿ & ಕಂಪೆನಿಯ ಪಾಲುದಾರ **ಮುಹಮ್ಮದ್ ಅಮೀನ್** ಆಯ್ಕೆಯಾಗಿದ್ದಾರೆ. ಮುಸ್ಲಿಂ ಸಮಾಜದ ಹಿರಿಯ ನೇತಾರರಾಗಿದ್ದ ಮರ್ಹೂಂ ಬಿ.ಎಂ.ಹಸನ್ ಹಾಜಿಯವರ ಪೌತ್ರ, ಹಿರಿಯ ಉದ್ಯಮಿ ಹಾಜಿ ಬಿ.ಕುಂಞಿ ಅಹ್ಮದ್‌ರವರ ಸುಪುತ್ರರಾದ ಅಮೀನ್, ಈ ಹಿಂದೆ KCCIಯ ಕಾರ್ಯದರ್ಶಿಯಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿ, ಇದೀಗ ಉಪಾಧ್ಯಕ್ಷ ಹುದ್ದೆಗೇರಿದ ಮೊದಲ ಮುಸ್ಲಿಂ ಉದ್ಯಮಿ ಎನಿಸಿದ್ದಾರೆ. ಶ್ರೀಯುತರು ಉದ್ಯಮ ಕ್ಷೇತ್ರದಲ್ಲಿ ಇನ್ನಷ್ಟು ಬೆಳಗಿ, ಸಮಾಜಕ್ಕೂ, ದೇಶಕ್ಕೂ ಗಣನೀಯ ಸೇವೆ ಸಲ್ಲಿಸುವ ಅವಕಾಶಗಳು ನಿರಂತರ ದೊರೆಯುತ್ತಿರಲಿ ಎಂದು ಹಾರೈಸುತ್ತಾ, ಹೃತ್ಪೂರ್ವಕ ಅಭಿನಂದನೆಗಳು.

ಲಂಡನ್ ಮೂಲದ ವಿಶ್ವಪ್ರಸಿದ್ಧ Institute of Chartered Shipbrokers (ICS) ಇತ್ತೀಚೆಗೆ ನಡೆದ ಪರೀಕ್ಷೆಯಲ್ಲಿ ಮಂಗಳೂರಿನ **ಹಸನ್ ಝುಕೀ ಮಾರೂಫ್** (S/o. ಹಾಜಿ ಇಬ್‌ರಾಹೀಂ ಬಾವ, ಮಂಗಳೂರು) ವಿಶೇಷ ಶ್ರೇಣಿ (Distinction) ಯಲ್ಲಿ ತೇರ್ಗಡೆ ಹೊಂದಿದ್ದಾರೆ. ಮರ್ಹೂಂ ಹಸನ್ ಹಾಜಿಯವರ ಪೌತ್ರರಾಗಿರುವ ಇವರು HH & Co ಆಡಳಿತದಾರರಾಗಿರುವ ಹಾಜೀ ಬಿ.ಕುಂಞಿ ಅಹ್ಮದ್‌ರವರ ಮಾರ್ಗದರ್ಶನದಲ್ಲಿ ಮುಸ್ಲಿಂ ಸಮಾಜಕ್ಕೆ ಹೆಮ್ಮೆದಾಯಕವಾದ ಅಪರೂಪದ ಸಾಧನೆ ದಾಖಲಿಸಿದ್ದಾರೆ. ಪ್ರತಿಭಾನ್ವಿತ ಹಸನ್ ಝುಕೀಯವರು ದೇಶಕ್ಕೆ, ಸಮಾಜಕ್ಕೆ ಇನ್ನಷ್ಟು ಕೀರ್ತಿ ತರಲಿ ಎಂದು ಹಾರೈಸುವ,

**ಅಲ್‌ಅನ್ಸಾರ್ ಬಳಗ, ಕುತ್ತಾರ್, ಮಂಗಳೂರು**





## ಪ್ರಾರ್ಥಿಸಲು ವಿನಂತಿ

ನಮ್ಮ ತಂದೆಯವರಾದ **ನಾರ್ವೆ ಮುಹ್‌ಯಿದ್ದೀನ್ ಹಾಜಿ** (85)ಯವರು ದಿನಾಂಕ 13.8.2011 ಶನಿವಾರದಂದು ಅಲ್ಲಾಹುವಿನ ಅನುಲ್ಲಂಘನೀಯ ವಿಧಿಗೆ ವಿಧೇಯರಾಗಿರುತ್ತಾರೆ.

ಮೃತರ ಮೇಲೆ ಮಯ್ಯಿತ್ ನಮಾಝ್ ಮಾಡಲು ಮತ್ತು ಪಾರತ್ರಿಕ ಮೋಕ್ಷಕ್ಕೆ ಪ್ರಾರ್ಥಿಸಲು ಸಾರ್ವಜನಿಕರಲ್ಲಿ ವಿನಂತಿಸುವ.

ನಾರ್ವೆ ಅಬ್ದುರ್ರಝಾಖ್ ಹಾಜಿ ಜೋಕಟ್ಟೆ

(ಮಿನಾಝ್ ಟೂರ್ಸ್ & ಟ್ರಾವೆಲ್ಸ್ ಮಂಗಳೂರು)

ಮತ್ತು ಸಹೋದರರು ಜೋಕಟ್ಟೆ



## ಮಡವೂರ್ ಸಿ.ಎಂ.ವಲಿಯುಲ್ಲಾಹಿ ಮಖಾಂ ಶರೀಫ್

ಪೋಸ್ಟ್ ಮಡವೂರ್, ಕೋಝಿಕ್ಕೋಡ್, ಕೇರಳ-673583, ಭಾರತ. ಫೋನ್:0495-2246113, 2245522, 2246421

**21ನೇ ಉರೂಸ್ ಮುಬಾರಕ್**

2011 ಸಪ್ಟೆಂಬರ್ 4,5,6,7,8,9,10 (ಶವ್ವಾಲ್ 4 ರಿಂದ 10)



ಸಪ್ಟೆಂಬರ್ 4ರಿಂದ 9ರ ತನಕ ಸುಪ್ರಸಿದ್ಧ ಉಲಮಾಗಳಿಂದ

**ಮತ ಪ್ರಭಾಷಣ**

ಸಪ್ಟೆಂಬರ್ 8ರಂದು ರಾತ್ರಿ

**ಸ್ವಲಾತ್ ಮಜ್ಲಿಸ್**

9ರಂದು ಸಂಜೆ 7-00ಕ್ಕೆ ದ್ಸಿಕ್ರ್ ದುಆ ಆಧ್ಯಾತ್ಮಿಕ ಸಮ್ಮೇಳನ

ವಿ.ಸೂ.: ಸಪ್ಟೆಂಬರ್ 10ರಂದು ಬೆಳಿಗ್ಗೆ ಗಂಟೆ 7.00 ರಿಂದ ಸಂಜೆ 4ರ ತನಕ ಅನ್ನದಾನ

ಇತೀ ಕಾರ್ಯದರ್ಶಿ, ಸಿ.ಎಂ.ಮಖಾಂ ಶರೀಫ್ ಮಡವೂರು



Owned, Published & Printed by : M. Ibraheem Bava, Hasan Enclave, Kuthar, P.O.Munnur, Mangalore. Editor : Al-Haj Bekal Ibraheem Musliyar.

Printed at : Sanabil Printing Press, Kuthar- 575 017, Mangalore. Ph: 0824-2467886